www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಸಂಚಿಕೆ–11 ನವಂಬರ್ 2015
Volume : IX Issue : 11 November 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಎರಡನೇ ಬರೋಣ
3. ಹೃದಯ
4. ಡಿಜಿಎಮ್ ಬೇತೇಲ್ ಅಂಕಣ
5. ಆರೋಗ್ಯ ಸ್ವರ
6. ನೀತಿವಂತನ ಆಶೀರ್ವಾದಗಳು
7. ಸ್ಥಳೀಯ ಮತ್ತು ವಿದೇಶ ಸುದ್ಧಿ
8. ಮಹಿಳೆಯರ ಸ್ವರ
9. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಪ್ರಿಯ ವಾಚಕ ಸಹೋದರ, ಸಹೋದರಿಯರಿಗೆ ನನ್ನ ವಂದನೆಗಳು.

ನಾವು ಅತೀ ಬೇಗನೆ ಈ ವರ್ಷದ ಅಂತ್ಯಕ್ಕೆ ಬಂದು ಬಿಟ್ಟಿದ್ದೇವೆ. ಸತ್ಯವೇದದಲ್ಲಿ ಹೇಳಿರುವ ಕರ್ತನಾದ ಯೇಸುಕ್ರಿಸ್ತನ ರಹಸ್ಯ ಬರೋಣದ ಗುರುತುಗಳು ಲೋಕದ ಎಲ್ಲಾ ಕಡೆ ನಡೆಯುವಂತದ್ದನ್ನು ನಾವು ಕಾಣುತ್ತಾ ಇದ್ದೇವೆ. ಲೂಕ. 21:33, ಮತ್ತಾ. 24:35ರ ಪ್ರಕಾರ ಭೂಮ್ಯಾಕಾಶಗಳು ಅಳಿದು ಹೋದರೂ ದೇವರ ವಾಕ್ಯಗಳು ಎಂದು ಅಳಿದು ಹೋಗಲಾರದು. ನಿಮಗೆ ಸತ್ಯವಾಗಿ ಹೇಳುತ್ತೇನೆ, ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು (ಮತ್ತಾ. 5:18).

ದೇವರ ವಾಕ್ಯವು ಕರ್ತನ ರಹಸ್ಯ ಬರೋಣದ ಕುರಿತಾಗಿ ನಮ್ಮನ್ನು ಎಚ್ಚರಿಸುತ್ತಾ ಇರುವುದರಿಂದ ನಾವೆಲ್ಲರೂ ಕರ್ತನನ್ನು ಸಂಧಿಸಲು ಸಿದ್ಧರಾಗಬೇಕು. ಆದದರಿಂದ ನೀನು ಹೊಂದಿದ ಉಪದೇಶವನ್ನೂ ಅದನ್ನು ಕೇಳಿದ ರೀತಿಯನ್ನೂ ನೆನಪಿಗೆ ತಂದುಕೊಂಡು ಅದನ್ನು ಕಾಪಾಡಿಕೋ ಮತ್ತು ದೇವರ ಕಡೆಗೆ ತಿರುಗಿಕೋ. ನೀನು ಎಚ್ಚರವಾಗಿಲ್ಲದಿದ್ದರೆ ಕಳ್ಳನು ಬರುವಂತೆ ಬರುವೆನು; ನಾನು ಯಾವ ಗಳಿಗೆಯಲ್ಲಿ ನಿನ್ನ ಮೇಲೆ ಬರುವೆನೋ ಅದು ನಿನಗೆ ತಿಳಿಯುವದೇ ಇಲ್ಲ (ಪ್ರಕ. 3:3).

ಒಂದು ಗುಂಪು ಜನರನ್ನು ಕರ್ತನ ರಹಸ್ಯ ಬರೋಣಕ್ಕೆ ಸಿದ್ಧಪಡಿಸುವುದೇ ದೇವರ ಸ್ವರ ಮಾಸಪತ್ರಿಕೆಯ ಉದ್ದೇಶವಾಗಿದೆ. ಸಮಸ್ತವನ್ನೂ ಸೃಷ್ಟಿಸಿ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನ ಮೇಲೆ ಆಣೆಯಿಟ್ಟು ಇನ್ನು ಸಾವಕಾಶವಿರುವದಿಲ್ಲ (ಪ್ರಕ. 10:7). ಆದರೆ ನಾವೆಲ್ಲರೂ ಸಿದ್ಧವಾಗಿದ್ದೇವೋ? ಕರ್ತನ ರಹಸ್ಯ ಬರೋಣದಲ್ಲಿ ನಾವು ಯಾರಾದರೂ ಕೈ ಬಿಡಲ್ಪಡದೇ ಇರಲು ನಮ್ಮನ್ನೇ ನಾವು ಸಿದ್ಧಪಡಿಸಿಕೊಳ್ಳೋಣ. ಕರ್ತನಾದ ಯೇಸುಕ್ರಿಸ್ತನು ನಿಮ್ಮೆಲ್ಲರನ್ನು ಆಶೀರ್ವದಿಸಲಿ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **ಉಪದೇಶ ಮಾತನಾಡುತ್ತದೆ** :– ನಾವು ಪಾಪದ ಮಾರ್ಗದಲ್ಲಿ ಜೀವಿಸುವಾಗ ಉಪದೇಶವು ನಮ್ಮ ಜೊತೆಯಲ್ಲಿ ಮಾತನಾಡಿ ಸರಿಯಾದ ಮಾರ್ಗದಲ್ಲಿ ನಮ್ಮನ್ನು ನಡೆಸುತ್ತದೆ. "ನೀವು ಬಲಕ್ಕಾಗಲಿ ಎಡಕ್ಕಾಗಲಿ ತಿರುಗಿಕೊಳ್ಳುವಾಗ ಇದೇ ಮಾರ್ಗ, ಇದರಲ್ಲೇ ನಡೆಯಿರಿ ಎಂದು ನಿಮ್ಮ ಹಿಂದೆ ಆಡುವ ಮಾತು ನಿಮ್ಮ ಕಿವಿಗೆ ಬೀಳುವದು" (ಯೆಶಾ. 30:21).

6) "ಕಂದಾ, ನನ್ನ ಮಾತುಗಳನ್ನು ಅನುಸರಿಸು, ನನ್ನ ಆಜ್ಞೆಗಳನ್ನು ಮನಸ್ಸಿನಲ್ಲಿಟ್ಟುಕೋ. ನನ್ನ ಉಪದೇಶವನ್ನು ಕಣ್ಣುಗುಡ್ಡಿನಂತೆ ಪಾಲಿಸು, ನನ್ನ ಆಜ್ಞೆಗಳನ್ನು ಕೈಕೊಂಡು ಬಾಳು. ಅವುಗಳನ್ನು ನಿನ್ನ ಬೆರಳುಗಳಿಗೆ ಉಂಗುರವಾಗಿ ಇಟ್ಟುಕೋ, ಹೃದಯದ ಹಲಗೆಯಲ್ಲಿ ಬರೆ. ಜ್ಞಾನವನ್ನು ಅಕ್ಕಾ ಎಂದು ಹೇಳು, ವಿವೇಕವನ್ನು ಆಪ್ತಮಿತ್ರಳೇ ಎಂದು ಕರೆ. ಅವು ಜಾರಳಿಂದ, ಸವಿಮಾತನಾಡುವ ಪರಸ್ತ್ರೀಯಿಂದ, ನಿನ್ನನ್ನು ರಕ್ಷಿಸುವವು" (ಜ್ಞಾನೋ. 7:1–5). ಉಪದೇಶವು ಜಾರಸ್ತ್ರೀಯಿಂದಲೂ ಸವಿಮಾತನಾಡುವ ಪರಸ್ತ್ರೀಯಿಂದಲೂ ನಮ್ಮನ್ನು ರಕ್ಷಿಸುತ್ತದೆ.

ಇಂದು ಲೋಕದಲ್ಲಿ ವಂಚನೆಗಿಂತಲೂ ಪಾಪವು ತುಂಬಿಕೊಂಡಿದೆ. ಇಂದು ಅನೇಕ ಕ್ರೈಸ್ತ ವಿಶ್ವಾಸಿಗಳು ವ್ಯಭಿಚಾರ ಪಾಪದಲ್ಲಿ, ಅಕ್ರಮ ಸಂಬಂಧಗಳಲ್ಲಿ ಜೀವಿಸುವಂತದ್ದನ್ನು ಲೋಕದಲ್ಲಿ ಕಾಣಬಹುದು. ಇಂದು ಅನೇಕರಿಗೆ ದೇವರ ಭಯ ಇಲ್ಲ ಅದಕ್ಕೆ ಕಾರಣ ಉಪದೇಶದ ಕೊರತೆ. ಅನೇಕ ದೇವ ಸೇವಕರು ಮದುವೆ ವಿಚಾರದಲ್ಲಿ, ಕುಟುಂಬದ ವಿಷಯದಲ್ಲಿ ತಮ್ಮ ಸಭೆಗೆ ಬೋಧಿಸುವುದನ್ನು ಮರೆತಿದ್ದಾರೆ. "ನಿನ್ನ ಹಿಂಡುಗಳ ಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಿರು; ನಿನ್ನ ಮಂದೆಗಳ ಮೇಲೆ ಮನಸ್ಸಿಡು" (ಜ್ಞಾನೋ. 27:23).

ನಾನು ಒಂದು ದೇಶಕ್ಕೆ ಹೋದಾಗ ಒಂದು ಸುದ್ಧಿ ಕೇಳಿದೆ ಬರುವ ವಾರ ಒಂದು ಸಹೋದರನಿಗೆ ಮದುವೆ ಕೇಳಿದಾಗಲೇ ನನಗೆ ಆಶ್ಚರ್ಯವಾಯಿತು. ಯಾರೊಂದಿಗೆ ಎಂದು ಕೇಳಿದಾಗ ಇನ್ನು ಆಶ್ಚರ್ಯವಾಯಿತು. ಕಾರಣ ಆ ಸ್ತ್ರೀಯನ್ನು ಕೂಡ ನಾನು ತಿಳಿದಿದ್ದೆ. ಇಬ್ಬರಿಗೂ ಮದುವೆಯಾಗಿದೆ, ಇಬ್ಬರಿಗೂ ಪ್ರೀತಿಯಾಗಿ ಪರಸ್ಪರ ಮದುವೆಯಾಗುತ್ತಿದ್ದಾರೆ, ಇಬ್ಬರಿಗೂ ಮಕ್ಕಳಿದ್ದಾರೆ. ಅವರ ಸಭಾಪಾಲಕರ ಬಳಿ ನಾನು ಮಾತನಾಡಿದೆ ಆಗ ಅವರು ಕೊಟ್ಟಂತಹ ಉತ್ತರ ನಾವು ಹೇಳುವಂತದ್ದನ್ನು ಹೇಳುತ್ತೇವೆ, ಅನುಸರಿಸುವುದು ಅವರಿಗೆ ಬಿಟ್ಟದ್ದು. ನಾವು ಈಗ ಮದುವೆ ಮಾಡದಿದ್ದರೆ ನಂಬಿಕೆಯಲ್ಲಿ ಅವರು ಬಿದ್ದು ಹೋಗುವರು ಎಂಬುದಾಗಿ ಒಂದು ಪ್ರಸಂಗವನ್ನೇ ಹೇಳಿದರು.

ಅವರಿಬ್ಬರನ್ನೂ ಕುಳಿತುಕೊಳ್ಳಿಸಿ ಅವರ ತಪ್ಪನ್ನು ಅವರಿಗೆ ತಿಳಿಸಿ ಅವರವರ ಸಂಗಾತಿಗಳೊಂದಿಗೆ ಒಂದು ಮಾಡಿ ಅವರ ದಾಂಪತ್ಯ ಜೀವಿತವು ಮುರಿಯದ ಹಾಗೆ ನೋಡಿಕೊಂಡು ಅವರನ್ನು ಕಟ್ಟುವುದು, ತಪ್ಪುಗಳನ್ನು ಖಂಡಿಸಿ ಬುದ್ಧಿ ಹೇಳಿ ಅವರನ್ನು ಸರಿಯಾದ ಮಾರ್ಗದಲ್ಲಿ ನಡೆಸುವುದು ಒಬ್ಬ ದೇವರ ಸೇವಕನ ಕರ್ತವ್ಯವಾಗಿದೆ. ಅದಕ್ಕೆ ಬದಲು ನ್ಯಾಯಕ್ಕೆ ವಿರುದ್ಧವಾಗಿ ಅವರ ಮದುವೆ ಮಾಡುವುದು ಒಬ್ಬ ಸೇವಕನ ದೊಡ್ಡ ತಪ್ಪು. "ನನ್ನ ಸಹೋದರರೇ, ಬೋಧಕರಾದ ನಿಮಗೆ ಕಠಿಣವಾದ ತೀರ್ಪು ಆಗುವುದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ" (ಯಾಕೋ. 3:1). ಇಂದು ಅನೇಕ ಕ್ರೈಸ್ತ ಸಭೆಗಳು ಸದೋಮಗೋಮರದ ಮಾರ್ಗವನ್ನು ಹಿಡಿಯುವುದನ್ನು ನಾವು ಲೋಕದಲ್ಲಿ ಕಾಣಬಹುದು. "ಗಂಡ ಹೆಂಡರ ಸಂಬಂಧವು ನಿಷ್ಕಳಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿಸುವನೆಂದು ತಿಳುಕೊಳ್ಳಿರಿ" (ಇಬ್ರಿ. 13:4). "ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರೂ ಎಣಿಸಬೇಕು" (ಇಬ್ರಿ. 13:3).

ನಾನು ಒಂದು ದೇಶದಲ್ಲಿ ಇನ್ನೊಂದು ಸಭೆಗೆ ಹೋಗಿದ್ದೆ. ಅಲ್ಲಿ ಒಬ್ಬ ಯೌವನಸ್ಥ ಅಕ್ರಮವಾಗಿ ಮದುವೆಯಾದ ಸ್ತ್ರೀಯ ಜೊತೆಯಲ್ಲಿ ವಾಸ ಮಾಡುತ್ತಿದ್ದ. ಆ ಸಭೆಯ ಬೋಧಕರು ಅವರಿಬ್ಬರನ್ನು ಕರೆಸಿ ದೇವರ ವಾಕ್ಯ ಪ್ರಕಾರ ಅವರಿಗೆ ಆಲೋಚನೆ ಕೊಡಲು ಹೆಂಡತಿ ತನ್ನ ಗಂಡನ ಬಳಿ ಕ್ಷಮೆಕೇಳಿ ಸೇರಿಕೊಂಡರು ಮಾತ್ರವಲ್ಲ ಆ ಹುಡುಗ ಕೂಡ ದೇವರ ಆಲೋಚನೆಯನ್ನು ಅಂಗೀಕರಿಸಿ ಬೇರೆ

ನಾನೇ ನಿಮ್ಮ ಜೊತೆಯಲ್ಲಿ ಬಂದು ನಿಮಗೆ ವಿಶ್ರಾಂತಿಯನ್ನು ಉಂಟುಮಾಡುವೆನು ಅಂದನು (ವಿಮೋ. 33:14).

ಒಂದು ಮದುವೆಯಾಗಿ ಈಗ ಸಂತೋಷದಿಂದ ಇದ್ದಾರೆ. ಉಪದೇಶವು ನಮ್ಮನ್ನು ಎಲ್ಲಾ ತಪ್ಪಾದ ಸಂಗತಿಗಳಿಂದ ರಕ್ಷಿಸುತ್ತದೆ. ಅನೇಕರು ದೇವ ಸೇವಕರು ಎಚ್ಚರಿಸಿದ್ದಾಗಲೂ ಎಚ್ಚರಗೊಳ್ಳದೆ ತಮ್ಮದೇ ಮಾರ್ಗದಲ್ಲಿ ಮುಂದುವರಿದು ಆರೋಗ್ಯ, ಸಂತೋಷ, ಸಮಾಧಾನ ಕಳಕೊಳ್ಳುತ್ತಾರೆ. ನನಗೆ ಗೊತ್ತಿರುವ ಒಂದು ಸಭೆಯಲ್ಲಿ ಒಂದು ಸಹೋದರಿ ಒಂದು ಅವಿಶ್ವಾಸಿ ಸಹೋದರನ ಪ್ರೀತಿಯಲ್ಲಿ ಸಿಕ್ಕಿಕೊಂಡಳು. ಅವಳ ತಂದೆ ತಾಯಿ, ಸಭಾಪಾಲಕರು ಎಷ್ಟು ಹೇಳಿದರೂ ಕೇಳದೆ ಅವನ ಜೊತೆ ಹೋಗಿ ಮದುವೆ ಮಾಡಿಕೊಂಡಳು. ಸ್ವಲ್ಪ ದಿವಸದಲ್ಲಿ ಗರ್ಭಿಣಿಯಾಗಿ ಒಂದು ಹೆಣ್ಣು ಮಗುವಿಗೆ ಜನ್ಮಕೊಟ್ಟಳು. ಅವಳ ಗಂಡ ಮಾರ್ಗ ಮಧ್ಯದಲ್ಲಿ ಅವಳನ್ನು ಬಿಟ್ಟು ಓಡಿ ಓದ. ಯಾರೋ ಅವಳ ಪರಿಸ್ಥಿತಿ ನೋಡಿ ಒಂದು ಅನಾಥಾಶ್ರಮಕ್ಕೆ ಸೇರಿಸಿದರು. ಈಗ ಹೆಣ್ಣು ಮಗುವಿನ ಜೊತೆಯಲ್ಲಿ ಆಶ್ರಮದಲ್ಲಿ ಕಣ್ಣೀರಿನಿಂದ ಜೀವನ ಸಾಗಿಸುತ್ತಿದ್ದಾಳೆ. ಅನೇಕರಿಗೆ, ದಾರಿ ತಪ್ಪುವಾಗ ದೇವ ಸೇವಕರು ಹೇಳುವಂತಹ ಬುದ್ಧಿವಾದ ಹಿಡಿಸುವುದಿಲ್ಲ, ಕೋಪ ಬರುತ್ತದೆ, ದೇವ ಸೇವಕರನ್ನೇ ದೂರುತ್ತಾರೆ. ಅವರ ಮನೆಯವರೇ ಕೆಲವು ಸಲ ಅವರಿಗೆ ಸಹಾಯ ಮಾಡುತ್ತಾರೆ. ದೇವರ ಚಿತ್ತಕ್ಕೆ ವಿರುದ್ಧವಾಗಿ ಹೋದದ್ದರಿಂದ ಅನೇಕ ಸಮಸ್ಯೆಗಳಿಗೆ ಒಳಗಾಗಿ ಕಣ್ಣೀರಿನಿಂದ ಜೀವನ ಸಾಗಿಸುತ್ತಾರೆ. "ಅಯ್ಯೋ, ನಾನು ಸದುಪದೇಶವನ್ನು ಎಷ್ಟು ದ್ವೇಷಿಸಿದೆ, ನನ್ನ ಹೃದಯವು ಬುದ್ಧಿವಾದವನ್ನು ಎಷ್ಟು ತಾತ್ಸಾರ ಮಾಡಿತು, ನನ್ನ ಬೋಧಕರ ಮಾತನ್ನು ಕೇಳದೆ ಹೋದೆನಲ್ಲಾ, ನನ್ನ ಉಪದೇಶಕರ ಕಡೆಗೆ ಕಿವಿಗೊಡಲಿಲ್ಲವಲ್ಲಾ! ನಾನು ಮಹಾಜನಸಭೆಯ ನಡುವೆ ಎಲ್ಲಾ ಕೇಡಿಗೂ ಸಿಕ್ಕಿಕೊಳ್ಳುವ ಹಾಗೆ ಆದೆನು ಎಂದು ಅಂದುಕೊಳ್ಳುವಿ" (ಜ್ಞಾನೋ. 5:12–14). "ಮನುಷ್ಯನು ಮೂರ್ಖತನದಿಂದ ತನ್ನ ಗತಿಯನ್ನು ಕೆಡಿಸಿಕೊಂಡು ಯೆಹೋವನ ಮೇಲೆ ಕುದಿಯುವನು" (ಜ್ಞಾನೋ. 19:3). ಆದಾಮನು ತನ್ನ ತಪ್ಪಿಗೆ ಕಾರಣ ಹವ್ವಳ ಮೇಲೆ ಹಾಕಿದ, ಹವ್ವಳು ಸರ್ಪವನ್ನು ದೂರಿದಳು. ಇಂದು ಅನೇಕರು ತಪ್ಪಿಗೆ ಬೇರೆಯವರನ್ನು ದೂರುತ್ತಾರೆ, ಇನ್ನು ಕೆಲವರು ದೇವರನ್ನು ದೂರುತ್ತಾರೆ. ಇಂದು ನಿಮ್ಮ ತಪ್ಪನ್ನು ದೇವರ ಮುಂದೆ ಒಪ್ಪಿಕೊಂಡು ಪಶ್ಚಾತ್ತಾಪ ಪಡುವುದಾದರೆ ದೇವರು ನಿಮ್ಮ ಕಣ್ಣೀರನ್ನು ಒರೆಸಿ ಹೊಸ ಆಶೀರ್ವಾದಕ್ಕೆ ನಡೆಸಲು ಶಕ್ತನಾಗಿದ್ದಾನೆ. "ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವದಿಲ್ಲ, ಇನ್ನು ದು:ಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು ಎಂದು ಹೇಳಿತು. ಆಗ ಸಿಂಹಾಸನದ ಮೇಲೆ ಕೂತಿದ್ದವನು ಇಗೋ, ಎಲ್ಲವನ್ನು ಹೊಸದುಮಾಡುತ್ತೇನೆ ಅಂದನು" (ಪ್ರಕ.21:4–5).

ದೇವರು ನಿನ್ನ ಜೀವಿತವನ್ನು ಹೊಸದು ಮಾಡಲು ಇಷ್ಟಪಡುತ್ತಿದ್ದಾನೆ ಅದಕ್ಕಾಗಿ ನಿನ್ನನ್ನು ದೇವರ ಕರಗಳಿಗೆ ಒಪ್ಪಿಸಿಕೊಡುತ್ತೀಯೋ?

ಮುಂದುವರಿಯುವದು..........

**ಪಾ॥ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

## ಪ್ರಾರ್ಥನಾ ಮನವಿಗಳು

- **ಭಾರತ ದೇಶ ರಕ್ಷಿಸಲ್ಪಡುವಂತೆ ನಶಿಸಿ ಹೋಗುತ್ತಿರುವ ಪ್ರತಿಯೊಂದು ಆತ್ಮಗಳು ರಕ್ಷಣೆ ಹೊಂದುವಂತೆ ಪ್ರಾರ್ಥಿಸಿರಿ.**
- **ಪ್ರತಿಯೊಂದು ವಿಶ್ವಾಸಿಗಳು ಪರಿಶುದ್ಧತೆಯಿಂದ ಕರ್ತನ ಬರೋಣಕ್ಕೆ ಸಿದ್ಧರಾಗುವಂತೆ ಪ್ರಾರ್ಥಿಸಿರಿ.**
- **ನಮ್ಮ ಭಾರತ ದೇಶದಲ್ಲಿರುವ ಎಲ್ಲಾ ಬರಗಾಲ, ನೀರಿನ ಕೊರತೆ, ವಿದ್ಯುತ್ತಶ್ಚಕ್ತಿಯ ಕೊರತೆ, ಬಡತನಗಳು ನೀಗಿ ಸುಕ್ಷೇಮ ಮತ್ತು ಸಮೃದ್ಧಿ ಉಂಟಾಗುವಂತೆ ಪ್ರಾರ್ಥಿಸಿರಿ.**
- **ದೇವರು ವಾತವರಣವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವಂತೆ ಯಾವುದೇ ಅತಿವೃಷ್ಟಿ, ಅನಾವೃಷ್ಟಿ ಸಂಭವಿಸದಂತೆ ಪ್ರಾರ್ಥಿಸಿರಿ.**
- **ದೇವರ ಸ್ವರ ಮಾಸ ಪತ್ರಿಕೆಯ ಮೂಲಕ ಅನೇಕರು ರಕ್ಷಿಸಲ್ಪಡುವಂತೆ, ಈ ಸೇವೆಯು ವಿಸ್ತಾರವಾಗುವಂತೆ ಪ್ರಾರ್ಥಿಸಿರಿ.**

ಚೀಯೋನಿನಲ್ಲಿರುವ ಯೆಹೋವನು ದೊಡ್ಡವನು;
ಆತನು ಎಲ್ಲಾ ಜನಾಂಗಗಳಲ್ಲಿ ಮಹೋನ್ನತನು (ಕೀರ್ತ. 99:2).

# ಎರಡನೇ ಬರೋಣ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

2) **ಮನ:ಸ್ಸಾಕ್ಷಿಯ ಯುಗ ಅಥವಾ ಮನ:ಸಾಕ್ಷಿಯ ಕಾಲ :–** ಆದಾಮುಹವ್ವಳ ಬೀಳುವಿಕೆಯಿಂದ ಪ್ರಾರಂಭಿಸಿ ಜಲಪ್ರಳಯದವರೆಗೆ ಮನ:ಸಾಕ್ಷಿಯ ಯುಗ (ಆದಿ. 6:3) ಇದು ಹೆಚ್ಚು ಕಡಿಮೆ 1856 ವರ್ಷಗಳೆನ್ನಬಹುದು.

ಆದಾಮ ಹವ್ವಳ ಅವಿಧೇಯತೆಯಿಂದ ನಾಲ್ಕು ಸಂಗತಿಗಳನ್ನು ತಿಳಿದರು.

ಅ. ಕರ್ತನಿಗೂ ಆತನ ಉದ್ದೇಶಗಳಿಗೂ ವಿರೋಧವಾಗಿ ಕ್ರಿಯೆ ಮಾಡುವಂಥ ದುಷ್ಟ ಶಕ್ತಿ ಒಂದು ಇದೆ ಎಂದರಿತರು.

ಆ. ಅವಿಧೇಯತೆಗೂ ಅಪನಂಬಿಕೆಗೂ ಸಿಕ್ಕುವ ಪ್ರತಿಫಲವನ್ನು ಅರಿತರು.

ಇ. ಕರ್ತನಲ್ಲೂ ಆತನ ಜ್ಞಾನದಲ್ಲೂ, ನಂಬಿಕೆಯಿಡುವದರಿಂದ ಉಂಟಾಗುವ ಶ್ರೇಯಸ್ಸನ್ನು ಅರಿತರು.

ಈ. ಕೆಡುಕನ್ನು ಹಗೆಮಾಡಿ ಒಳ್ಳೇದನ್ನು ಆರಿಸಿಕೊಳ್ಳಬೇಕೆಂಬದರ ಅವಶ್ಯಕತೆಯನ್ನು ಅರಿತರು.

ಈಗ ಅವರ ಮನ:ಸಾಕ್ಷಿಗೆ ಜೀವಬಂದಿತು. ಇದಕ್ಕೆ ಮೊದಲು ಅವರಿಗೆ ಮನ:ಸ್ಸಾಕ್ಷಿ ಇರಲಿಲ್ಲ. ಮನ:ಸ್ಸಾಕ್ಷಿ ಎಂಬದು, ಒಳ್ಳೇದು ಕೆಟ್ಟದ್ದನ್ನು ತಿಳಿಯುವ ತಿಳುವಳಿಕೆ. ಇದು ಒಳ್ಳೇದು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಫಲವನ್ನು ತಿಂದದ್ದರಿಂದ ಉಂಟಾಯಿತು. ಇದರ ನಂತರ ಕರ್ತನು ಮನ:ಸ್ಸಾಕ್ಷಿಯ ಮೂಲಕ ಮಾತನಾಡಲು ಪ್ರಾರಂಭಿಸಿದನು.

3. **ಮಾನವ ಆಳ್ವಿಕೆಯ ಯುಗ** (ಆದಿ. 11:9): ಜಲಪ್ರಳಯದ ಕಾಲದಿಂದ ಪ್ರಾರಂಭಿಸಿ ಬಾಬೆಲ್ ಗೋಪುರದ ಕಟ್ಟೋಣವು ತಾರುಮಾರಾದ ಕಾಲವೂ ಸೇರಿ ಅಬ್ರಹಾಮನ ಕಾಲದವರೆಗೆ ಸಾಗಿತು. ಈ ಕಾಲವು ಸುಮಾರು 427 ವರ್ಷಗಳು. ಇದರ ಪ್ರಾರಂಭವು ಬಹಳ ಉತ್ತಮವಾಗಿತ್ತು. ಆಗ ನೋಹನಿಗೆ 600 ವರ್ಷವಯಸ್ಸು. ಈ ರೀತಿ ದೀರ್ಘಕಾಲ ವಾಸಿಸಿದ ಒಬ್ಬ ವ್ಯಕ್ತಿ ಒಳ್ಳೆಯ ಅನುಭವಶಾಲಿಯಾಗಿ ಅವನ ಕುಟುಂಬದವರೆಲ್ಲರೂ ಹೆಚ್ಚು ವಯಸ್ಸುಳ್ಳವರಾಗಿಯೇ ಇದ್ದರು. ಯಾಕಂದರೆ ಯೌವನಸ್ಥನಾದ ಶೇಮನು 98 ವರ್ಷದವನಾಗಿದ್ದನು. ಪಾಪದ ಫಲವಾಗಿ ಜಗತ್ತಿಗೆ ಬಂದ ಜಲಪ್ರಳಯ ಅವರಿಗೆ ಎಚ್ಚರಿಕೆಯ ಸಂಭವವಾಗಿತ್ತು.

ನೋಹನು ಯಜ್ಞವೇದಿಯನ್ನು ಕಟ್ಟಿ ಸರ್ವಾಂಗ ಹೋಮ ಮಾಡಿದ್ದರಿಂದ ನೋಹನನ ಕುಟುಂಬವು ಕರ್ತನನ್ನು ಸೇವಿಸುವ ಪದ್ಧತಿಯನ್ನು ಅರಿತಿದ್ದನು. ಅವರ ಆರಾಧನೆಯನ್ನು ಕರ್ತನು ಅಂಗೀಕರಿಸಿ, ಮಾನವ ಕುಲಕ್ಕೆ ಒಳ್ಳೇದನ್ನೂ, ಕೃಪೆಯನ್ನೂ ಅನುಗ್ರಹಿಸಿ, ವಾಗ್ದಾನಗಳನ್ನು ಕೊಟ್ಟದ್ದಲ್ಲದೆ ಅವರನ್ನು ಅಭಿವೃದ್ಧಿಯಾಗಿ ಹೆಚ್ಚಿರಿ, ಭೂಮಿಯ ಮೇಲೆ ನಿಮಗೆ ಬಹುಸಂತಾನವಾಗಲಿ ಎಂದು ಹೇಳಿ ಆಶೀರ್ವದಿಸಿದನು (ಆದಿ. 9:7).

**ಈ ಸಮಯದಲ್ಲಿ ನಡೆದ ಘಟನೆಗಳು :–**

ಅ. ಆ ಸಮಯದಲ್ಲಿ ಮುಗಿಲ ಬಿಲ್ಲನ್ನು ಕರ್ತನು ಏರ್ಪಡಿಸಿದನು (ಆದಿ. 9:8–17).

ಆ. ಆ ಸಮಯದಲ್ಲಿ ಕರ್ತನು ಮಾನವ ಕುಲಕ್ಕೆ ಆಹಾರವಾಗಿ ಪೈರುಗಳೊಂದಿಗೆ ಜೀವಜಂತುಗಳನ್ನೂ (ಮಾಂಸ) ಕೊಟ್ಟನು (ಆದಿ. 9:2–3).

ಇ. ಮಾನವನಿಗಾಗಿ ಮುಯ್ಯಿ ತೀರಿಸಲ್ಪಡುವದು ಎಂದೂ, ಮೃಗವಾಗಿದ್ದರೂ ಮರಣದಂಡನೆ ಉಂಟು ಎಂಬ ವಿಷಯವನ್ನೂ ತಿಳಿಸಿದನು. (ಆದಿ. 9:5–6).

ಈ. ಭೂಮಿಯ ಶೀತೋಷ್ಣಸ್ಥಿತಿಯಲ್ಲಿ ದೊಡ್ಡ ಬದಲಾವಣೆ ಉಂಟಾಯಿತು (ಆದಿ. 8:22).

ಉ. ಈ ಕಾಲದಲ್ಲಿ ಮನುಷ್ಯನ ಆಯುಸ್ಸು ಕಡಿಮೆಯಾಗಿ 120 ವರ್ಷವಾಯಿತು (ಆದಿ. 6:3).

ಊ. ಈ ಕಾಲದಲ್ಲೇ ಮಾನವನ ಭಾಷೆ ತಾರುಮಾರಾಯಿತು. ಅನೇಕ ಭಾಷೆಗಳು, ಜನಾಂಗಗಳು ಉಂಟಾದವು (ಆದಿ. 11:6–9).

ಈ ರೀತಿಯಾಗಿ ಮಾನವನ ಆಳ್ವಿಕೆಯ ಕಾಲವು ನೋಹನನ ನಾಯಕತ್ವದಲ್ಲಿ ಏರ್ಪಡಿಸಲ್ಪಟ್ಟದ್ದರಿಂದ ಆಗಿನಕಾಲದ ಆಳ್ವಿಕೆ "ಮಾನವ ಆಳ್ವಿಕೆಯ ಯುಗ"ವೆಂದು ಕರೆಯಲ್ಪಟ್ಟಿತು. ಚಿಕ್ಕದಾಗಲಿ ದೊಡ್ಡದಾಗಲಿ ಎಲ್ಲಾ ಆಳ್ವಿಕೆಯ ಪರಿಮಾಣಗಳೂ ಇದರಿಂದಲೇ ಪ್ರಾರಂಭವಾಯಿತು.

ನೋಹನನ ಸಂತತಿ ಮಕ್ಕಳು ಹೆಚ್ಚತೊಡಗಿದರು, ದೇವಚಿತ್ತಕ್ಕೆ ವಿರೋಧವಾಗಿ ಬಾಬೆಲ್ ಗೋಪುರವನ್ನು ಕಟ್ಟ ತೊಡಗಿದರು. ಆದ್ದರಿಂದ ಕರ್ತನು ಇಳಿದುಬಂದು ಅವರ ಭಾಷೆಯನ್ನು ತಾರುಮಾರು ಮಾಡಿದನು.

ಇದರ ನಂತರ ಕರ್ತನು ತನ್ನ ಉದ್ದೇಶವನ್ನು ನೆರವೇರಿಸಲು ತೀರ್ಮಾನಿಸಿ ಒಂದು ಕುಟುಂಬವನ್ನು ಆರಿಸಿಕೊಂಡನು. ಬಾಬೆಲ್ ಗೋಪುರ ಚದುರಿದ ನಂತರ ಮಾನವನ ಆಳ್ವಿಕೆಯ ಕಾಲ ಮುಗಿಯಿತು.

**ಮುಖ್ಯಾಂಶ :** ಈ ಕಾಲದಲ್ಲಿ ನಿಮ್ರೋದನು ವಿಶೇಷವಾದವನು (ಆದಿ. 10:9). ಇವನು ಹಾಮನ ಸಂತತಿಯವನು. ದೇವರಿಗೆ ವಿರೋಧವಾಗಿ ಎದ್ದ ಇವನು, ಬಾಬಿಲೋನ್ ರಾಜ್ಯಕ್ಕೂ, ಅಶ್ಶೂರ್ಯರಿಗೂ, ಕಾನಾನ್ಯರಿಗೂ ಅಸ್ತಿವಾರ ಹಾಕಿದವನು. ಇವನ ಮೂಲಕ ಅವಿಶ್ವಾಸ, ವಿಗ್ರಹಾರಾಧನೆ ಮೊದಲಾದವುಗಳೆಲ್ಲಕ್ಕೂ ಮಾರ್ಗವಾದ ಬಾಬಿಲೋನ್ ಆರಂಭವಾಯಿತು. ಪ್ರಪಂಚದ ಸರ್ವಜನರೂ ವಿಗ್ರಹಗಳನ್ನು

ಅವನ ಸಂತಾನವನ್ನು ಯಾವಾಗಲೂ ಉಳಿಸುವೆನು.
ಅವನ ಸಿಂಹಾಸನವು ಆಕಾಶವಿರುವವರೆಗೂ ಇರುವದು (ಕೀರ್ತ. 89:29).

ಪೂಜಿಸುವಂತೆ ಮಾಡಿದನು. ಆಗ ಕರ್ತನು ತನ್ನ ಕುಮಾರನಾದ ಕ್ರಿಸ್ತನನ್ನು ಪ್ರಕಟಪಡಿಸುವದಕ್ಕಾಗಿ ಜನರನ್ನು ಸಿದ್ಧಪಡಿಸಲು ಅಬ್ರಹಾಮನನ್ನು ಕರೆದು ಅವನ ಸಂತತಿಯನ್ನು ತನ್ನ ಸ್ವಂತ ಜನವನ್ನಾಗಿ ಆರಿಸಿಕೊಂಡನು.

4. **ವಾಗ್ದಾನದ ಯುಗ :–** ಅಬ್ರಹಾಮನಿಂದ ಸೀನಾಯ್ ಬೆಟ್ಟದವರೆಗೆ ವಾಗ್ದಾನದ ಯುಗ (ಮೂಲ ಪಿತೃಗಳ ಕಾಲ). ಭಾಷೆಗಳು ತಾರುಮಾರಾಗಿ ಜನಾಂಗಗಳು ಚದರಿದ ತರುವಾಯ, ಮಾನವರು ಸ್ವೇಚ್ಛಾಪರರಾಗಿ ಜೀವಿಸಿದ್ದರಿಂದ ಅವರನ್ನು ತಳ್ಳಿಬಿಟ್ಟು ಅಬ್ರಹಾಮನನ್ನೂ, ಅವನ ಕುಟುಂಬವನ್ನೂ ಪ್ರಪಂಚಕ್ಕೆ ಸಾಕ್ಷಿಯಾಗಿಯೂ, ರಕ್ಷಣೆಯ ಆಶೀರ್ವಾದವನ್ನು ತರುವಂಥ ಕಾಲುವೆಯನ್ನಾಗಿ ಕರ್ತನು ಆರಿಸಿಕೊಂಡನು.

ಕರ್ತನು ಅಬ್ರಹಾಮನಿಗೆ ದರ್ಶನಕೊಟ್ಟು, ಅವನು ದೇಶವನ್ನು ತೊರೆದು ಬರುವಂತೆಯೂ, ಅವನ ಮೂಲಕ ದೊಡ್ಡ ಜನಾಂಗವನ್ನು ಉಂಟುಮಾಡುವದಾಗಿಯೂ ವಾಗ್ದಾನ ಮಾಡಿದನು. ಆದ್ದರಿಂದಲೇ ಈ ಕಾಲಕ್ಕೆ ವಾಗ್ದಾನದ ಕಾಲವೆಂದು ಕರೆಯಲಾಗಿದೆ. ಈ ಕಾಲವು ಅಬ್ರಹಾಮನನ್ನು ಕರೆದ ಮೊದಲುಗೊಂಡು, ಇಸ್ರಾಯೇಲ್ಯರು ಐಗುಪ್ತದಲ್ಲಿ ದಾಸತ್ವವನ್ನು ಅನುಭವಿಸಿದ 430 ವರ್ಷಗಳವರೆಗೆ ಮುಂದುವರೆಯಿತು. ಅಬ್ರಹಾಮನು ಕರ್ತನ ಮೇಲೆ ನಂಬಿಕೆಯಿಟ್ಟು, ತನ್ನ ಪತ್ನಿ ಸಾರಾಳನ್ನು ಕರೆದುಕೊಂಡು, ಲೋಟನೊಂದಿಗೆ ಪಾಲಸ್ತೀನ ಎಂಬ ದೇಶಕ್ಕೆ ಹೊರಟುಹೋದನು. ಅದು ಅವನ ಸಂತತಿಯವರಿಗೆ ಮುಂದಿನ ದಿನಗಳಲ್ಲಿ ಕೊಡಲ್ಪಟ್ಟ ದೇಶ (ಆದಿ. 12:4–9).

ಅಬ್ರಹಾಮನೊಂದಿಗೆ ಕರ್ತನು ಮಾಡಿದ ಒಡಂಬಡಿಕೆಯಂತೆ ಅವನು ಆ ದೇಶದಲ್ಲೇ ವಾಸವಾಗಿರಬೇಕು ಇಲ್ಲದಿದ್ದಲ್ಲಿ ಆಶೀರ್ವಾದವು ಇಲ್ಲವಾಗುವುದು ಎಂಬ ನಿಬಂಧನೆಯು ಇದ್ದಂತೆ ಕಾಣುವದು (ಆದಿ. 26:13). ಇದೇ ಒಡಂಬಡಿಕೆಯನ್ನು ಕರ್ತನು ಇಸಾಕನೊಂದಿಗೂ ಸ್ಥಿರಪಡಿಸಿದನು. ನೀನು ಐಗುಪ್ತದೇಶಕ್ಕೆ ಇಳಿದುಹೋಗಬೇಡ, ನಾನು ಹೇಳುವ ದೇಶದಲ್ಲಿ ನೀನು ವಾಸಮಾಡಬೇಕು ಎಂದು ಹೇಳಿದನು. ಅಬ್ರಹಾಮನ ಮರಣದ ತರುವಾಯ ಗೋತ್ರಪ್ರಧಾನರ ಕಾಲದಲ್ಲಿ ಮೀರುವಿಕೆಯೂ, ದೇವಭಕ್ತಿಯಲ್ಲಿ ಕೊರತೆಯೂ ಉಂಟಾದದ್ದನ್ನು ಕಾಣಬಹುದು.

ಅಬ್ರಹಾಮನಿಗಿಂತ ಇಸಾಕನು, ಇಸಾಕನಿಗಿಂತ ಯಾಕೋಬನು, ಯೋಸೇಫನ ಹೊರತಾಗಿ ಯಾಕೋಬನ ಎಲ್ಲಾ ಮಕ್ಕಳೂ ದೇವಭಕ್ತಿಯಲ್ಲಿ ಕೊರತೆಯುವುಳ್ಳವರಾಗಿಯೇ ಕಾಣಲ್ಪಟ್ಟರು. ಕೊನೆಯದಾಗಿ ಈ ಕುಟುಂಬವು ಐಗುಪ್ತ್ಯದಲ್ಲಿ ದಾಸತ್ವಕ್ಕೊಳಗಾಯಿತೆಂದು ನೋಡುತ್ತೇವೆ (ವಿಮೋ. 1:7–22, 2:23, 5:6–9).

ಈ ರೀತಿಯಾಗಿ ಮೂಲ ಪಿತೃಗಳ ಕಾಲವು, ಹಿಂದಿನ ಕಾಲಗಳಂತೆ ಸೋಲಿನಲ್ಲಿ ಮುಂದುವರೆಯಿತು. ಆಗ ಇಸ್ರಾಯೇಲ್ಯರನ್ನು ರಕ್ತದಿಂದ ವಿಮೋಚಿಸಿ (ವಿಮೋ. 12ನೇ ಅಧ್ಯಾಯ) ಫರೋಹನ ದಾಸತ್ವದಿಂದ ಬಿಡುಗಡೆ ಮಾಡಿ (ವಿಮೋ. 19ನೇ ಅ) ಕೊನೆಯದಾಗಿ ಸೀನಾಯಿಬೆಟ್ಟದ ಬುಡಕ್ಕೆ ಕರೆತಂದು ಅವರಿಗೆ ಧರ್ಮಶಾಸ್ತ್ರವನ್ನು ಕೊಟ್ಟು, ಮತ್ತೊಂದು ಕಾಲವನ್ನು ಕರ್ತನು ಪ್ರಾರಂಭಿಸಿದನು.

5. ಧರ್ಮಶಾಸ್ತ್ರದ ಕಾಲ : ಈ ಕಾಲವು ಸೀನಾಯಿಯಿಂದ ಪ್ರಾರಂಭವಾಗಿ ಕಲ್ವಾರಿಯವರೆಗಿನ ಕಾಲ (ಅಂದರೆ ಕ್ರಿ. ಪೂರ್ವ 1491 ರಿಂದ ಕ್ರಿ.ಶ. 30ರವರೆಗೆ)

ಧರ್ಮಶಾಸ್ತ್ರವು ಮೋಶೆಯ ಮುಖಾಂತರವಾಗಿ ಕೊಡಲ್ಪಟ್ಟಿತು. ಕೃಪೆಯೂ ಸತ್ಯವೂ ಯೇಸುಕ್ರಿಸ್ತನ ಮೂಲಕ ಉಂಟಾಯಿತು (ಯೋಹಾ. 1:17).

ಅನಂತರದ ಕಾಲಗಳು, ಮಾನವನು ಪಾಪದಿಂದ ವಿಮೋಚಿಸಲ್ಪಡಲಾರದ ಕಾಲಗಳಾದ್ದರಿಂದ, ಕರ್ತನು, ಮಾನವನ ಎಲ್ಲಾ ಜೀವಿತದಲ್ಲೂ ತನ್ನ ಚಿತ್ತವನ್ನು ತಿಳಿಸುವದಕ್ಕಾಗಿ ಧರ್ಮಶಾಸ್ತ್ರವನ್ನು ಕೊಟ್ಟನು. ಇಡೀ ಪ್ರಪಂಚವು ಆತನ ಪರಾಮರಿಕೆಯ ಅಧೀನದಲ್ಲಿದ್ದಾಗ್ಯೂ, ಈ ಕಾಲದಲ್ಲಿ ಇಡೀ ಪ್ರಪಂಚದೊಂದಿಗೆ ನೇರವಾಗಿ ಸಂಪರ್ಕಿಸುವದನ್ನು ನಿಲ್ಲಿಸಿ, ಇಸ್ರಾಯೇಲ್ ಎಂಬ ಒಂದೇ ಜನಾಂಗವನ್ನು ಮಾತ್ರವೇ ಆರಿಸಿಕೊಂಡು ಅವರಿಗೆ ಮಾತ್ರ ತಾನು ಅರಸನಾಗಿದ್ದು, ಅವರ ಮೂಲಕ ತಾನು ಇಡೀ ಪ್ರಪಂಚಕ್ಕೆ ಆಶೀರ್ವಾದಕರವಾಗಿರಲು ಕರ್ತನು ಮನಸ್ಸುಮಾಡಿದನು. ಆದ್ದರಿಂದ ಅವರ ಮೂಲಕ, ಇತರ ಜನಾಂಗಗಳು ಈ ದೇವರು ಯಾರು ಎಂದೂ? ಆತನು ಎಂಥಾ ಪರಿಶುದ್ಧನೂ ನೀತಿವಂತನೂ ಎಂದೂ ಕಾಣುವಂತೆ ಈ ಧರ್ಮಶಾಸ್ತ್ರವನ್ನು ಅನುಗ್ರಹಿಸಿದನು. ಈ ಧರ್ಮಶಾಸ್ತ್ರವನ್ನು ಕೊಟ್ಟಾಗ ಇಸ್ರಾಯೇಲ್ಯರು ತಮ್ಮ ಪಾಪ ಸ್ವಭಾವವನ್ನು ಅರಿತು, ತಾವು ಈ ಧರ್ಮಶಾಸ್ತ್ರಕ್ಕೆ ವಿಧೇಯರಾಗಿರುತ್ತೇವೆಂದು ಮೂರು ಸಾರಿ ಮಾತುಕೊಟ್ಟರು. ನಂತರ ರಕ್ತವನ್ನು ಚಿಮುಕಿಸಿ ಒಡಂಬಡಿಕೆಯನ್ನು ಮೋಶೆ ಮುದ್ರಿಸಿದನು (ವಿಮೋ. 19:8, 2:4–3, 7:8). ಈ ಮುದ್ರೆಯ ಗುರುತು ಯಾವದೆಂದರೆ, ಅವರು ಅದಕ್ಕೆ ವಿಧೇಯರಾಗದಿದ್ದಲ್ಲಿ ಅವರ ಪ್ರಾಣವೇ ಅದಕ್ಕೆ ಹೊಣೆ ಎಂಬದನ್ನು ಸೂಚಿಸುವದಾಗಿತ್ತು. ದೇವರು ಕೊಟ್ಟ ಧರ್ಮಶಾಸ್ತ್ರವು ಮೂರುಭಾಗಗಳಾಗಿ ವಿಭಾಗಿಸಲ್ಪಟ್ಟಿದೆ.

1. ಸನ್ಮಾರ್ಗದ ಶಾಸ್ತ್ರ : ಇದು ಮಾನವನಿಗೂ, ಪರಿಶುದ್ಧ ದೇವರಿಗೂ ಇರುವಂಥ ದೇವಚಿತ್ತ ಏನು ಎಂಬದನ್ನು ತೋರಿಸುವದು (ವಿಮೋ. 20:1–17).
2. ಸಮೂಹ ಶಾಸ್ತ್ರ : ಇದು ಮಾನವರು ಒಬ್ಬರಿಗೊಬ್ಬರು ಮಾಡಬೇಕಾದ ಕರ್ತವ್ಯಗಳನ್ನೂ, ಸಂದರ್ಭಗಳನ್ನು ತೋರಿಸುತ್ತದೆ (ವಿಮೋ. 20,21,22,23ನೇ ಅಧ್ಯಾಯಗಳು).
3. ಆರಾಧನೆಯ ಶಾಸ್ತ್ರ : ಇದು ಪರಿಶುದ್ಧವಾದ ಕರ್ತನನ್ನು, ಪಾಪಿಯಾದ ಮಾನವನು ಆರಾಧಿಸುವದಕ್ಕೆ ಬೇಕಾದ ಭಕ್ತಿಯ ಜೀವಿತವನ್ನು ಹೊಂದಿಕೊಂಡು, ಆತನನ್ನೇ ಆರಾಧಿಸುವದನ್ನು ತೋರಿಸುತ್ತದೆ (ವಿಮೋ. 24:12–18).

ಈ ರೀತಿಯಾಗಿ ಕರ್ತನು, ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರವನ್ನು

ನನ್ನ ಕೃಪೆಯು ಅವನಲ್ಲಿ ಶಾಶ್ವತವಾಗಿ ಇರುವದು;
ನನ್ನ ಒಡಂಬಡಿಕೆಯು ಅವನಲ್ಲಿ ಸ್ಥಿರವಾಗಿರುವದು (ಕೀರ್ತ. 89:28).

ಅನುಗ್ರಹಿಸಿ ಧರ್ಮಶಾಸ್ತ್ರದ ಕಾಲವನ್ನು ಪ್ರಾರಂಭಿಸಿದನು. "ಇಸ್ರಾಯೇಲ್ಯರ ರಾಜ್ಯವನ್ನು ದೈವಿಕ ರಾಜ್ಯವೆನ್ನಬಹುದು. ಅವರ ಮಧ್ಯೆ ನಾನು ವಾಸಿಸುವದಕ್ಕೆ ನನಗೆ ಒಂದು ದೇವಾಲಯವನ್ನು ಕಟ್ಟಿಸಬೇಕು ಎಂದನು. ಅದೇ "ದೇವದರ್ಶನ ಗುಡಾರ" (ವಿಮೋ. 25:8). ಇಸ್ರಾಯೇಲ್ಯರ ಅರಸನಾದ "ಯೆಹೋವನ ಅರಮನೆ". ಇದೇ ಆತನ ಮಹಿಮೆಯಿಂದ ತುಂಬಿರುವ ಪವಿತ್ರಸ್ಥಳ. ಆತನ ರಾಜ್ಯಕ್ಕೆಂದು ವಿಧಿಸಿದ ಕಾನೂನು ಕಟ್ಟಳೆಗಳೇ ಮೇಲೆ ಹೇಳಲ್ಪಟ್ಟ ಧರ್ಮಶಾಸ್ತ್ರದ ನೀತಿ ನಿಯಮಗಳು.

ಯಾಜಕರೆಂಬ ಮಂತ್ರಿಗಳೊಡಗೂಡಿ, ಆ ರಾಜ್ಯದ ನಿವಾಸಿಗಳಾದ ಇಸ್ರಾಯೇಲ್ಯರನ್ನು ಕರ್ತನಾದ ಯೆಹೋವನು ತಾನೇ ನೇರವಾಗಿ ಆಳ್ವಿಕೆ ನಡಿಸುತ್ತಿದ್ದನು. ಈ ರೀತಿ ಮಹೋನ್ನತವಾಗಿ ಮೆರೆಯಲು ಆರಂಭಿಸಿದಾಗ್ಯೂ, ಇಸ್ರಾಯೇಲ್ಯರ ಚರಿತ್ರೆಯೂ ಅವರ ಕಾಲಗಳು ಮರುಭೂಮಿಯಲ್ಲೂ, ವಾಗ್ದಾನದ ದೇಶದ ಅರಸರ ಕಾಲದಲ್ಲೂ, ಪ್ರವಾದಿಗಳ ಸೇವಾಕಾಲಗಳಲ್ಲೂ ಸೆರೆವಾಸದಲ್ಲೂ, ಸೆರೆಯಿಂದ ಬಿಡುಗಡೆ ಹೊಂದಿದಾಗಲೂ, ಈ ಎಲ್ಲಾ ಕಾಲಗಳನ್ನೂ, ಬೀಳುವಿಕೆಯೂ, ಹಿಂಜಾರಿಕೆಯೂ, ದಂಗೆ, ದೊಂಬಿಗಳು ತುಂಬಿದ ಕಾಲಗಳಾಗಿಯೇ ಇದ್ದವು. ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನಾದ ಯೇಸುಕ್ರಿಸ್ತನನ್ನು ಶಿಲುಬೆಯಲ್ಲಿ ಜಡಿದಂಥ ಮಹಾ ಪಾಪದಿಂದ ಈ ಕಾಲದ ಬೀಳುವಿಕೆಯು ಅಘೋರವಾದ ಸ್ಥಿತಿಯಾಗಿ ಮುಕ್ತಾಯವಾಯಿತು. ನಂತರದ ಕಾಲಚಕ್ರವು ಇದರ ಒಂದು ಅಂಶವೇ ಆಗಿದೆ.

ಆ ಕಾಲದ ಸ್ಥಿತಿಗತಿಗಳು :

1. ಮೋಶೆಯು ಬೆಟ್ಟದ ಶಿಖರದಲ್ಲಿ ಧರ್ಮಶಾಸ್ತ್ರವನ್ನು ಪಡೆಯುತ್ತಿರುವಾಗಲೇ, ಇಸ್ರಾಯೇಲ್ಯರು "ಬಸವನನ್ನು" ರೂಪಿಸಿ, ಅದಕ್ಕೆ ಅಡ್ಡಬಿದ್ದು ಯಜ್ಞಗಳನ್ನು ಅರ್ಪಿಸಿ ಕುಣಿದಾಡುತ್ತಿದ್ದರು (ವಿಮೋ. 32ನೇ ಅಧ್ಯಾಯ).
2. ಕರ್ತನು ಅರಣ್ಯದಲ್ಲಿ ಅವರಿಗೆ ಊಟಕ್ಕಾಗಿ ಕೊಟ್ಟಂಥ ದೇವದೂತರ ಆಹಾರವಾದ ಮನ್ನವನ್ನು ಅಲ್ಪವಾಗೆಣಿಸಿ, ಮಾಂಸವನ್ನು ಆಶಿಸಿ, ದೇವರಿಗೆ ವಿರೋಧವಾಗಿ ಗುಣುಗಾಡಿದರು (ಅರಣ್ಯ. 11ನೇ ಅಧ್ಯಾಯ).
3. ಕರ್ತನನ್ನು ನಂಬಿದ್ದ ಗೂಢಚಾರರಾದ ಕಾಲೇಬ ಮತ್ತು ಯೆಹೋಶುವ ಎಂಬುವವರು ದೇಶವನ್ನು ಸಂಚರಿಸಿ ನೋಡಿ, ಹಿಂದಿರುಗಿ ಬಂದು ಹೇಳಿದಂಥಾ ಸಂಗತಿಗಳನ್ನು ನಂಬದವರಾಗಿ ಇಸ್ರಾಯೇಲ್ಯರು ಐಗುಪ್ತಕ್ಕೆ ಹಿಂದಿರುಗೋಣ ಎಂದುಕೊಂಡರು (ಅರ. 14:1).
4. ಧರ್ಮಶಾಸ್ತ್ರವನ್ನು ಮುಖಾಮುಖಿಯಾಗಿ ಪಡೆದುಕೊಂಡಂಥ ಮೋಶೆಯೂ ಸಹ. ಕರ್ತನನ್ನು ಮಹಿಮೆಪಡಿಸದವನಾಗಿ, ಬಂಡೆಯೊಂದಿಗೆ ಮಾತಾಡುವಂತೆ ಹೇಳಿದಾಗ ಅವನು ಅದನ್ನು ಹೊಡೆದು ಪಾಪಕ್ಕೆ ಗುರಿಯಾದನು (ಅರಣ್ಯ.20:7–12).
5. ಕಾನಾನ್ ದೇಶದ ಹೆಚ್ಚು ಪ್ರದೇಶವನ್ನು ಜಯಿಸಿದ ತರುವಾಯ, ಯೆಹೋಶುವನ ಮರಣದ ನಂತರ, ಇಸ್ರಾಯೇಲ್ಯರು ತಮ್ಮ ಕರ್ತನಲ್ಲಿ ಭಯಭಕ್ತಿಯಿಂದ ನಡೆದುಕೊಳ್ಳುವದಾಗಿ ಏಕವಾಗಿ ಮಾತುಕೊಟ್ಟರು. ಆದರೆ ನ್ಯಾಯಸ್ಥಾಪಕರ ಪುಸ್ತಕವಿಡೀ, ಅವರು ಪುನ: ಬಿದ್ದುಹೋದದ್ದನ್ನು, ಸೋಲುಗಳನ್ನು ಅನುಭವಿಸಿದ್ದನ್ನು, ಹೆಚ್ಚಾಗಿ ಕಾಣುತ್ತೇವೆ. ಮಾನಸಾಂತರಪಟ್ಟು ಕರ್ತನೆಡೆಗೆ ಬರುವಾಗ, ಆತನು ಅವರಿಗಾಗಿ ನ್ಯಾಯಾಧಿಪತಿಗಳನ್ನು ಏರ್ಪಡಿಸಿ ಅವರ ಮೂಲಕ ಜಯವನ್ನು ಕೊಟ್ಟನು.
6. ಸಮುವೇಲನು ಉತ್ತಮವಾದ ಕರ್ತನು ಮೆಚ್ಚಿಕೊಂಡಂಥ ನ್ಯಾಯಾಸ್ಥಾಪಕನಾಗಿದ್ದನು. ತರುವಾಯ, ಅವನ ಮಕ್ಕಳು ಅವನಂತೆ ನೀತಿವಂತರಾಗಿ ನಡೆಯದೆ ಹೋದದ್ದರಿಂದ, ಜನರು ತಮಗೆ ಒಬ್ಬ ಅರಸನು ಬೇಕೆಂದು ಕೇಳಿಕೊಂಡರು. ಕರ್ತನು ಅರಸನನ್ನು ಅವರಿಗೆ ನೇಮಿಸಿದ ನಂತರ ಅರಸನೂ, ಜನರೂ ದೇವ ಆಜ್ಞೆಯನ್ನು ಮೀರಿನಡೆದರು (1 ಸಮು. 15:7–26, 13:8–14).
7. ಕರ್ತನಿಗೆ ಒಪ್ಪುವಂಥಾ ದಾವೀದನು, ಕರ್ತನಿಗೆ ಮೆಚ್ಚಿಗೆಯಾದದ್ದನ್ನು ಮಾಡದೆ ಅದಕ್ಕೆ ಬದಲಾಗಿ, ಕರ್ತನಿಗೆ ವಿರೋಧವಾದ ಪಾಪಕಾರ್ಯ ಮಾಡಿದನು (2 ಸಮು. 11:13–16).
8. ಸಮಾಧಾನವನ್ನುಂಟು ಮಾಡಬೇಕಾದವನೂ, ಕರ್ತನಿಗೆ ಮಹಾದೊಡ್ಡ ಆಲಯವನ್ನು ಕಟ್ಟಿದವನೂ ಆದಂಥ ಸೊಲೊಮೋನನು ಸ್ತ್ರೀವ್ಯಾಮೋಹಕ್ಕೆ ಒಳಗಾಗಿ ಅನ್ಯದೇವರುಗಳ ಕಡೆಗೆ ತನ್ನ ಹೃದಯವನ್ನು ತಿರುಗಿಸಿ, ಅವುಗಳಿಗೆ ಪೂಜಾಸ್ಥಳಗಳನ್ನು ಏರ್ಪಡಿಸಿದನು (1 ಅರ. 11:1–11).
9. ಸೊಲೊಮೋನನ ಮಗನಾದ ರೆಹಬ್ಬಾಮನು ಅಹಂಕಾರಿಯಾಗಿ, ತನ್ನ ಇಷ್ಟದಂತೆ ಆಳ್ವಿಕೆ ಮಾಡತೊಡಗಿದನು, ಉತ್ತರ ಭಾಗದಲ್ಲಿದ್ದ 10 ಗೋತ್ರಗಳವರು ಸೊಲೊಮೋನನ ಕೈಕೆಳಗೆ ಇದ್ದಂಥ ಯಾರೋಬ್ಬಾಮ ಎಂಬವನ ನಾಯಕತ್ವದಲ್ಲಿ ಕ್ರಾಂತಿ ಮಾಡಿದಾಗ ದೇಶವು ಇಬ್ಭಾಗವಾಯಿತು (1 ಅರ. 12:1) ಇದು ಸಹ ಕರ್ತನ ತೀರ್ಮಾನವಾಗಿತ್ತು.

ಉತ್ತರ ದೇಶದವರಾದ ಇಸ್ರಾಯೇಲಿನ ಅರಸರೆಲ್ಲರೂ ಮೊದಲನೇ ಅರಸನಾದ ಯಾರೋಬ್ಬಾಮನು ಮೊದಲ್ಗೊಂಡು ಅಶ್ಶೂರದವರಿಂದ ಸೆರೆಹಿಡಿಯಲ್ಪಟ್ಟಾಗ ಆಳುತ್ತಿದ್ದ ಹೋಶೆಯ ಎಂಬ ಅರಸನವರೆಗೆ ಆಳಿದವರೆಲ್ಲರೂ ದುರ್ಮಾಗಿಗಳಾಗಿ ಜೀವಿಸಿದರು (2 ಅರಸು. 17:23 ಮುಖ್ಯವಾದ ಈ ಭಾಗವನ್ನು ಓದಿರಿ).

ಮುಂದುವರಿಯುವದು.....

**ಸಂಗ್ರಹ.**

ಉತ್ಸಾಹ ಧ್ವನಿಯನ್ನು ಕೇಳಿದ ಜನರು ಧನ್ಯರು; ಯೆಹೋವನೇ,
ಅವರು ನಿನ್ನ ಮುಖಪ್ರಕಾಶದಲ್ಲಿ ಸಂಚರಿಸುತ್ತಾರೆ (ಕೀರ್ತ. 89:15).

# ಹೃದಯ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

3) **ಶುದ್ಧ ಹೃದಯ** (ಕೀರ್ತ. 51:10) :– ದಾವೀದನು ದೇವರಲ್ಲಿ ಪ್ರಾರ್ಥಿಸುತ್ತಾನೆ, ಶುದ್ಧ ಹೃದಯವನ್ನು ನಿರ್ಮಿಸು. ದೇವರು ಹೃದಯ ನೋಡಿ ಪ್ರತಿಫಲ ಕೊಡುವವನು. ಮನುಷ್ಯರಂತೆ ಹೊರಗಿನ ತೋರಿಕೆಗೆ ಮಹತ್ವಕೊಡುವುದಿಲ್ಲ. "ನೀನಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ" (ಇಬ್ರಿ. 10:22). ಕೆಲವರು ಅವರಿಗೆ ತಕ್ಕಂತೆ, ಇವರಿಗೆ ತಕ್ಕಂತೆ ಜೀವಿಸಿ ದೇವರ ಚಿತ್ತವನ್ನು ಬಿಟ್ಟು ಯಥಾರ್ಥತ್ವವನ್ನು ಕಳೆದುಕೊಳ್ಳುವರು. ಹಣದ ಮೂಲಕ ಪವಿತ್ರ ಆತ್ಮನನ್ನು ಹೊಂದಲು ನೋಡಿದ ಸೀಮೋನನ್ನು ಕಂಡು ಪೇತ್ರನು ನಿನ್ನ ಹೃದಯವು ದೇವರ ಮುಂದೆ ಸರಿಯಿಲ್ಲ ಎಂದು ಗದರಿಸುವುದನ್ನು ಕಾಣುತ್ತೇವೆ (ಅ.ಕೃ. 8:19–22). ಅದೇ ಪ್ರಕಾರ ಅಪೊ. 5ನೇ ಅಧ್ಯಾಯದಲ್ಲಿ ಅನನೀಯ, ಸಪ್ಫೈರ ದಂಪತಿಗಳು ಹೃದಯದಲ್ಲಿ ಸೈತಾನನು ವಂಚಿಸಿದ್ದನ್ನು ಕಾಣುತ್ತೇವೆ. "ನಿರ್ಮಲ ಚಿತ್ತರು ಧನ್ಯರು; ಅವರು ದೇವರನ್ನು ನೋಡುವರು"(ಮತ್ತಾ. 5:8). ಪರಿಶುದ್ಧತೆಯಿಲ್ಲದೆ ಯಾರು ದೇವರನ್ನು ಕಾಣಲು ಸಾಧ್ಯವಿಲ್ಲ (ಇಬ್ರಿ. 12:14–15). ಸೌಲನ ಹೃದಯದಲ್ಲಿ ಕೆಟ್ಟದ್ದು ತುಂಬಿರುವುದರಿಂದ ಆತನು ದಾವೀದನನ್ನು ಕೊಲ್ಲಲು ಈಟಿ ಎಸೆಯುತ್ತಿದ್ದನು. ಆದರೆ ದಾವೀದನು ಶುದ್ಧ ಹೃದಯವುಳ್ಳವನಾದ್ದರಿಂದ ಸೌಲನು ತನ್ನ ಕೈಗೆ ಸಿಕ್ಕದ್ದರೂ ಸೌಲನನ್ನು ಕೊಲ್ಲದೆ ದೇವರಿಗೆ ಭಯಪಟ್ಟನು. ಯೋಚನೆ ಹೃದಯದಲ್ಲಿ ಹುಟ್ಟಿಕೊಳ್ಳುವುದು (ಆದಿ. 6:5). ಯೋಚನೆಗಳು ಪರಿಶುದ್ಧವಾಗಿರುವುದರಿಂದ ನಮ್ಮ ಕಾರ್ಯಗಳು ಹಾಗೂ ನಮ್ಮ ಮಾತುಗಳು ಸಹ ಶುದ್ಧವಾಗಿರುವುದು. ಅಂತಿಯೋಕ್ಯದಲ್ಲಿದ್ದ ಸಭೆಯಿಂದ ಪವಿತ್ರಾತ್ಮನು ಬಾರ್ನಬ ಪೌಲರನ್ನು ಕರೆದ ಕೆಲಸಕ್ಕಾಗಿ ಪ್ರತ್ಯೇಕಿಸಿರಿ ಎಂದು ಹೇಳಿದನು. ಆಗ ಸಭೆಯವರು ಉಪವಾಸವಿದ್ದು, ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣ ಮಾಡಿ ಅವರನ್ನು ಕಳುಹಿಸಿಕೊಟ್ಟನು (ಅ.ಕೃ. 13:2–3). ಹೃದಯದಲ್ಲಿ ದೃಢವಾಗಿರು. ಕರ್ತನು ನಿಮ್ಮನ್ನು ದೃಢಪಡಿಸಿ ಕೆಡುಕನ ಕೈಗೆ ಸಿಕ್ಕದಂತೆ ತಪ್ಪಿಸುವನು (2 ಥೆಸ. 3:3).

**ವಯಸ್ಕರ ಸ್ವರ**

2) **ದೃಢವಾದ ಹೃದಯ** : (1 ಥೆಸ. 3:13) ನಿಮ್ಮ ಹೃದಯಗಳನ್ನು ದೃಢಪಡಿಸಲಿ (ಯಾಕೋ. 5:8). ಚಂಚಲ ಹೃದಯವುಳ್ಳವನು ಬಿದ್ದು ಹೋಗುವನು. ಪೇತ್ರನು ಬಾ ಎಂದು ಕರೆದ ಯೇಸುವನ್ನು ಬಿಟ್ಟು ಗಾಳಿಯನ್ನು ನೋಡಿ ಚಂಚಲನಾದನು ಹಾಗೂ ಮುಳುಗಿಸುವ ಸ್ಥಿತಿಯಲ್ಲಿದ್ದನು. "ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ಥಚಿತ್ತರಾಗಿದ್ದು ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ದೊರಕುವ ಭಾಗ್ಯದ ಮೇಲೆ ನಿಮ್ಮ ನಿರೀಕ್ಷೆಯನ್ನು ಸಂಪೂರ್ಣವಾಗಿ ಇಡಿರಿ" (1 ಪೇತ್ರ. 1:13). ಬಹಳಷ್ಟು ನಮ್ಮನ್ನು ಚಿಂತೆಗಳು, ಭಯಗಳು ಹೃದಯವನ್ನು ಚಂಚಲಪಡಿಸುತ್ತದೆ. ದೇವ ಮಗುವೇ, ದೃಢವಾದ ಹೃದಯದಿಂದ ಹಾಗೂ ತೀರ್ಮಾನದಿಂದ ಕರ್ತನನ್ನು ಸೇವಿಸು. ಭಕ್ತನಾದ ಯೋಬನು ಹೇಳುತ್ತಾನೆ, "ನನ್ನ ನಡತೆಯಲ್ಲಿ ದಾರಿತಪ್ಪಿದ್ದರೆ ನನ್ನ ಹೃದಯವು ಕಂಡಕಂಡದ್ದನ್ನು ಹಿಂಬಾಲಿಸಿದ್ದರೆ ನನ್ನ ಕೈಗಳಲ್ಲಿ ಕಲ್ಮಷವು ಅಂಟಿಕೊಂಡಿದ್ದರೆ ನಾನು ಬಿತ್ತಿದ್ದನ್ನು ಮತ್ತೊಬ್ಬನು ಉಣ್ಣಲಿ, ನನ್ನ ಬೆಳೆಯು ನಿರ್ಮೂಲವಾಗಲಿ!" (ಯೋಬ. 31:7–8). "ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ" (ಯೆಶಾ. 26:3).

3) **ಕೆಟ್ಟ ಹೃದಯ** : ದೇವರನ್ನು ಬಿಟ್ಟು ಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು (ಇಬ್ರಿ. 3:12). ಸೈತಾನನು ನಮ್ಮೊಳಗೆ ಅಪನಂಬಿಕೆಯನ್ನು ತಂದು ಹಾಕಿ ನಮ್ಮನ್ನು ಕಠಿಣಪಡಿಸಿ ಬೀಳಿಸುತ್ತಾನೆ. ಅಪನಂಬಿಕೆ ನಮ್ಮನ್ನು ಬಹಳವಾಗಿ ಕಠಿಣಪಡಿಸಿ ಮೋಸಹೋಗುವಂತೆ ಮಾಡುತ್ತದೆ. 'ಪರಿಪೂರ್ಣ ನಂಬಿಕೆಯುಳ್ಳವರಾಗಿ ದೇವರ ಬಳಿಗೆ ಬನ್ನಿರಿ' (ಇಬ್ರಿ. 10:22). 'ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು' ಒಂದು ವೇಳೆ ಅವನು (ಅಪನಂಬಿಕೆಯಿಂದ) ಹಿಂತೆಗೆದರೆ ಅವನಲ್ಲಿ ನನಗೆ ಸಂತೋಷವಿಲ್ಲವೆಂದು ದೇವರು ಹೇಳುತ್ತಾನೆ (ಇಬ್ರಿ.

ನೀತಿ ನ್ಯಾಯಗಳು ನಿನ್ನ ಸಿಂಹಾಸನದ ಅಸ್ತಿವಾರವು;
ನಿನ್ನ ಸಾನ್ನಿಧ್ಯದೂತರು ಪ್ರೀತಿಸತ್ಯತೆಗಳೇ (ಕೀರ್ತ. 89:14).

10:38). ಹೃದಯ ಶುದ್ಧವಾದರೆ ಎಲ್ಲ ಶುದ್ಧ. ಹೃದಯ ಕೆಟ್ಟದಾಗಿದ್ದರೆ ಆಲೋಚನೆ, ಮಾತು, ಕಾರ್ಯಗಳು ಕೆಟ್ಟದಾಗಿರುತ್ತವೆ. ಮಾತ್ರವಲ್ಲದೆ ರಾತ್ರಿಯಲ್ಲಿ ಬೀಳುವ ಕನಸುಗಳು ಸಹ ಕೆಟ್ಟದಾಗಿರುತ್ತದೆ. ಕಾಯಿನನ ಹೃದಯವು ಕೆಟ್ಟದಾಗಿದ್ದರಿಂದ ತಮ್ಮನನ್ನು ದ್ವೇಷಿಸಿ ಕೊಂದು ಹಾಕಿದನು.

ಒಳ್ಳೆಯವನು ತನ್ನ ಹೃದಯವೆಂಬ ಒಳ್ಳೆಯ ಬೊಕ್ಕಸದೊಳಗಿನಿಂದ ಒಳ್ಳೆದನ್ನು ತರುತ್ತಾನೆ. ಕೆಟ್ಟವನು ಕೆಟ್ಟ ಬೊಕ್ಕಸದೊಳಗಿನಿಂದ ಕೆಟ್ಟದ್ದನ್ನು ತರುತ್ತಾನೆ. ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವುದು (ಲೂಕ. 6:45). ಯಾವುದೇ ಉಪಕರಣ ಆಗಿದ್ದರೂ, ವಾಹನಗಳು ಆಗಿದ್ದರೂ ನೋಡಲು ಒಳ್ಳೆಯದಾಗಿರುವುದಾದರೂ ಒಳಗಡೆ ಇಂಜಿನು ಸರಿಯಿಲ್ಲದಿದ್ದರೆ ಅದು ಪ್ರಯೋಜನ ಬರಲಾರದು. ಇಂಜಿನು ಚೆನ್ನಾಗಿ ಓಡುವುದಾದರೆ ತುಂಬಾ ಪ್ರಯೋಜನ. 'ಕೆಟ್ಟ ಹೃದಯದಿಂದ ಪ್ರೀತಿಯನ್ನಾಡುವ ತುಟಿಯು ಕೊಟ್ಟಬೆಳ್ಳಿ ಮುಲಾಮು ಮಾಡಿದ ಮಣ್ಣು ಮಡಿಕೆಯ ಹಾಗೆ' (ಜ್ಞಾನೋ. 26:23).

4) **ಕಠಿಣ ಹೃದಯ** : ಕಠಿಣ ಹೃದಯನು ಕೇಡಿಗೆ ಸಿಕ್ಕಿ ಬೀಳುವನು (ಜ್ಞಾನೋ. 28:14). ಕೆಲವರು ದೇವರ ವಾಕ್ಯವನ್ನು ಕೇಳಿ ಅದಕ್ಕೆ ವಿಧೇಯರಾಗುವುದನ್ನು ಬಿಟ್ಟು ಇನ್ನು ಕಠಿಣರಾಗಿ ವಾಕ್ಯವನ್ನು ಕೊಡುವವರನ್ನು ದೂಷಿಸುವವರಾಗಿರುತ್ತಾರೆ. ಕೆಲವರು ಸಭೆಯಲ್ಲಿ ಸಹ ಸೇವೆ ಮಾಡುವವರು ನಿಮ್ಮ ನಾಯಕರಿಗೆ ವಿಧೇಯರಾಗದೆ ನೀವು ದೇವರ ಸೇವೆ ಮಾಡುವುದಾದರೆ ಪರಲೋಕವು ಆ ಸೇವೆಯನ್ನು ಅಂಗೀಕರಿಸಲಾರದು. ಸೌಲನು ದೇವರ ಮಾತಿಗೆ ವಿಧೇಯನಾಗದ ಕಾರಣ ದೇವರಿಂದ ತಳ್ಳಲ್ಪಟ್ಟನು (1 ಸಮು. 16:11). "ನೀನು ಯೌವನದ ಇಚ್ಛೆಗಳಿಗೆ ದೂರವಾಗಿರು; ನೀತಿ ವಿಶ್ವಾಸ ಪ್ರೀತಿ ಮತ್ತು ಸಮಾಧಾನವನ್ನು ಸಂಪಾದಿಸುವದಕ್ಕೆ ಶುದ್ಧ ಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವರ ಸಂಗಡ ಪ್ರಯಾಸಪಡು" (2 ತಿಮೊ. 2:22).

ಮುಂದುವರಿಯುವದು.......

**ಪಾ|| ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

**ಡಿಜಿಎಮ್ ಬೇತೇಲ್**

# 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧುವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

**ಪ್ರಾರ್ಥನಾ ಗೋಪುರದ ವಿಳಾಸ :**

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ, ರಕ್ಷಣಾಪುರ ಕಂಪೌಂಡ್, ಇನ್ನಂಜೆ ಗ್ರಾಮ, ಉಡುಪಿ – 574115. ದೂರವಾಣಿ : 0091 820 2559886**

ನನ್ನ ನಂಬಿಗಸ್ತಿಕೆಯಿಂದ ಜಾರುವದಿಲ್ಲ.
ನನ್ನ ಒಡಂಬಡಿಕೆಯನ್ನು ಭಂಗಪಡಿಸುವದಿಲ್ಲ (ಕೀರ್ತ. 89:34).

# ಆರೋಗ್ಯಕರ ಉಪಹಾರದ ಮಹತ್ವ

ಆರೋಗ್ಯ ಸ್ವರ

ಒಂದು ಸಂತುಲಿತ ಆಹಾರ ಕ್ರಮವು ಸರಿಯಾದ ದೇಹ ತೂಕವನ್ನು ಕಾಪಾಡಿಕೊಳ್ಳಲು, ಆರೋಗ್ಯಕರ ಜೀವನವನ್ನು ನಡೆಸಲು ಮತ್ತು ಕಾಯಿಲೆಗಳ ಅಪಾಯವನ್ನು ತಗ್ಗಿಸಿಕೊಳ್ಳಲು ಸಹಾಯ ಮಾಡುತ್ತದೆ. ನಾವು ಏನನ್ನು ತಿನ್ನುತ್ತೇವೆ ಮತ್ತು ಹೇಗೆ ತಿನ್ನುತ್ತೇವೆ ಎಂಬ ಅಂಶಗಳು ನಮ್ಮ ಮನಸ್ಸು ಮತ್ತು ಬುದ್ಧಿಯ ಮೇಲೆ ವಿಶೇಷ ಪ್ರಭಾವವನ್ನು ಬೀರುತ್ತವೆ. ಸರಿಯಾದ ಸಮಯದಲ್ಲಿ ಆಹಾರ ಸೇವಿಸುವುದು ಸಹ ಬಹಳ ಅವಶ್ಯಕ. ಸುದೀರ್ಘ ಸಮಯದ ಉಪವಾಸದ ಅನಂತರ ತೆಗೆದುಕೊಳ್ಳುವ ಉಪಹಾರವು ಸಂತುಲಿತವಾಗಿರಬೇಕು ಮತ್ತು ಹೊಟ್ಟೆಯನ್ನು ತುಂಬಿಸುವಂತಿರಬೇಕು. ಬೆಳಗ್ಗಿನ ಉಪಹಾರ ಸೇವಿಸಿದ ಅನಂತರ, ಪ್ರತೀ ಮೂರು ಗಂಟೆಗಳಿಗೊಮ್ಮೆ ಸಣ್ಣ ಸಣ್ಣ ಪ್ರಮಾಣದ ಸಂಪೂರ್ಣ ಊಟಗಳನ್ನು ಸೇವಿಸಬಹುದು.

ರಾತ್ರಿ ಇಡಿಯ ಉಪವಾಸದ ಅನಂತರ ಸೇವಿಸುವ ಉಪಹಾರವು ನಮ್ಮ ಮೆದುಳು ಮತ್ತು ದೇಹಕ್ಕೆ ಶಕ್ತಿಯನ್ನು ತುಂಬುತ್ತದೆ. ಅದಕ್ಕಾಗಿ ಇದನ್ನು ಬ್ರೇಕ್ ಫಾಸ್ಟ್ ಎಂದು ಕರೆಯುತ್ತಾರೆ. ಅಂದರೆ ಇದರ ಅರ್ಥ ಬ್ರೇಕಿಂಗ್–ದ–ಫಾಸ್ಟ್ ಅಂದರೆ ಉಪವಾಸವನ್ನು ಮುರಿಯುವುದು ಎಂದು ಅರ್ಥ. ಉಪಹಾರ ಸೇವಿಸದೆ ನಿಮ್ಮ ದಿನಚರಿಯನ್ನು ಆರಂಭಿಸುವುದು ಎಂದರೆ ಪೆಟ್ರೋಲ್ ಇಲ್ಲದೆ ಕಾರನ್ನು ಸ್ಟಾರ್ಟ್ ಮಾಡಲು ಪ್ರಯತ್ನಿಸಿದಂತೆ.

ಕೆಲವು ಜನರು ದೇಹದ ತೂಕವನ್ನು ಇಳಿಸಬೇಕು ಎಂಬ ಪ್ರಯತ್ನದಲ್ಲಿ ಬೆಳಗ್ಗಿನ ಉಪಹಾರ ಸೇವಿಸುವುದನ್ನು ತಪ್ಪಿಸಿಕೊಳ್ಳುತ್ತಾರೆ ಆದರೆ ಇದು ಒಳ್ಳೆಯದಲ್ಲ. ಈ ಕ್ರಮದಿಂದ ತೂಕ ಇಳಿಸುವ ನಿಮ್ಮ ಪ್ರಯತ್ನದಲ್ಲಿ ಹಿನ್ನಡೆ ಆಗಬಹುದು. ಊಟವನ್ನು ಬಿಡುವುದರಿಂದ, ಅದರಲ್ಲೂ ವಿಶೇಷವಾಗಿ ಬೆಳಗ್ಗಿನ ಉಪಹಾರವನ್ನು ತಪ್ಪಿಸಿಕೊಳ್ಳುವುದರಿಂದ ದೇಹದ ತೂಕವನ್ನು ನಿಯಂತ್ರಿಸುವದು ಹೆಚ್ಚು ಕಷ್ಟ ಆಗಬಹುದು. ಬೆಳಗ್ಗಿನ ಉಪಹಾರವನ್ನು ಸೇವಿಸದೇ ಇರುವವರು ಅನಂತರ ಹೆಚ್ಚು ಆಹಾರವನ್ನು ಸೇವಿಸುತ್ತಿರುತ್ತಾರೆ ಅಥವಾ ತಮ್ಮ ಹಸಿವನ್ನು ದೂರ ಮಾಡಲು ಅಧಿಕ ಕ್ಯಾಲೊರಿಯ ಆಹಾರಗಳನ್ನು ಮೆಲ್ಲುತ್ತಾರೆ.

ಅನೇಕ ಜನರು ಬೆಳಗ್ಗಿನ ಉಪಹಾರದ ಮಹತ್ವವನ್ನು ಕಡೆಗಣಿಸುತ್ತಾರೆ. ಅವರು ಬೆಳಗ್ಗೆ ಕೇವಲ ಒಂದು ಗ್ಲಾಸ್ ಜ್ಯೂಸ್ ಅಥವಾ ಕಾಫಿಯನ್ನು ಕುಡಿದು, ಬೇರೇನನ್ನೂ ಸೇವಿಸದೆ ಹಾಗೆಯೇ ಇದ್ದು ಬಿಡುತ್ತಾರೆ. ಆದರೆ ಇದು ಒಳ್ಳೆಯ ಅಭ್ಯಾಸ ಅಲ್ಲ. ಬೆಳಗ್ಗೆ ಎಚ್ಚರವಾದ ಬಳಿಕದ ಮೊದಲ ಕೆಲವು ಗಂಟೆಗಳಲ್ಲಿ ಸಾಕಷ್ಟು ಆಹಾರವನ್ನು ಸೇವಿಸುವುದು ನಿಮಗೂ ನಿಮ್ಮ ಮಕ್ಕಳ ಆರೋಗ್ಯಕ್ಕೂ ಬಹಳ ಒಳ್ಳೆಯದು.

**ಉಪಹಾರದ ಪ್ರಯೋಜನಗಳು :–** ಬ್ರೇಕ್‌ಫಾಸ್ಟ್ ಅನ್ನುವ ಹೆಸರೇ ಹೇಳುವಂತೆ, ರಾತ್ರಿಯ ಊಟ ಮತ್ತು ಮಧ್ಯಾಹ್ನದ ಊಟಗಳ ನಡುವಿನ ಉಪವಾಸವನ್ನು ಮುರಿಯುವುದೇ ಬೆಳಗ್ಗಿನ ಉಪಹಾರದ ಉದ್ದೇಶ. ನೀವು ಬೆಳಗ್ಗಿನ ಉಪಹಾರವನ್ನು ಸೇವಿಸದೆ ಇದ್ದರೆ ನಿಮ್ಮ ದೇಹವು ಸುದೀರ್ಘ ಸಮಯದ ಉಪವಾಸದ ಸ್ಥಿತಿಗೆ ಒಳಗಾಗುತ್ತದೆ. ಆಗ, ನಿಮ್ಮ ದೇಹವು ನೀವು ಯಾವ ಸಂದರ್ಭದಲ್ಲಿಯೂ ಬೇಗ ಆಹಾರ ಸೇವಿಸುವುದೇ ಇಲ್ಲ ಎಂದು ನಂಬಲು ಆರಂಭಿಸುತ್ತದೆ. ಅಂತಿಮವಾಗಿ, ನೀವು ನಿಮ್ಮ ಮಧ್ಯಾಹ್ನದ ಊಟವನ್ನು ಸೇವಿಸಿದಾಗ ಮುಂದಿನ ಊಟ ಯಾವಾಗ ಸಿಗುತ್ತದೆ ಎಂಬುದು ಗೊತ್ತಿಲ್ಲದ ಕಾರಣ, ನಾನು ಇದನ್ನು ನಾಳೆಗಾಗಿ ಉಳಿಸಿ ಇಟ್ಟರೆ ಉತ್ತಮ ಎಂದು ಯೋಚಿಸುತ್ತದೆ ಮತ್ತು ನೀವು ಸೇವಿಸಿದ ಆಹಾರವನ್ನು ಕೊಬ್ಬಿನ ರೂಪದಲ್ಲಿ ಸಂಗ್ರಹಿಸಿಡುತ್ತದೆ. ಇದರ ಪರಿಣಾಮವಾಗಿ ದೇಹದ ತೂಕವು ಹೆಚ್ಚಾಗುತ್ತದೆ. ಒಂದು ವೇಳೆ ನೀವು ಬೆಳಗ್ಗಿನ ಉಪಹಾರವನ್ನು ಸೇವಿಸಿದರೆ, ಆ ಆಹಾರವನ್ನು ದೇಹವು ತನ್ನ ದಿನ ಬಳಕೆಯ ಶಕ್ತಿಯಾಗಿ ಪರಿವರ್ತಿಸಿಕೊಳ್ಳುತ್ತದೆ. ಉಪಹಾರ ಸೇವಿಸುವ ಜನರ ಕಾರ್ಯಶೀಲತೆ, ಸಮಸ್ಯೆಗಳನ್ನು ಪರಿಹರಿಸುವ ಕೌಶಲ ಮತ್ತು ಮಾನಸಿಕ ಕ್ಷಮತೆಯು ಹೆಚ್ಚು ಸಮರ್ಥವಾಗಿರುತ್ತದೆ ಮತ್ತು ಉತ್ತಮ ಮಟ್ಟದಲ್ಲಿ ಇರುತ್ತದೆ.

ಇಷ್ಟೇ ಅಲ್ಲ, ಯಾವ ವ್ಯಕ್ತಿಗಳು ಬೆಳಗ್ಗಿನ ಉಪಹಾರವನ್ನು ಸೇವಿಸುತ್ತಾರೋ, ಅವರ ಒಟ್ಟಾರೆ ಆಹಾರಕ್ರಮವೂ ಸಹ ಉತ್ತಮವಾಗಿರುತ್ತದೆ. ಒಂದು ಅಂದಾಜಿನ ಪ್ರಕಾರ, ಬೆಳಗ್ಗಿನ ಉಪಹಾರವನ್ನು ತಪ್ಪಿಸಿಕೊಳ್ಳುವವರು, ಆಗಾಗ ಕುರುಕಲು ತಿಂಡಿಗಳನ್ನು ತಿನ್ನುತ್ತಿರುತ್ತಾರೆ. ಹೆಚ್ಚು ಸಹಿತಿನಿಸುಗಳನ್ನು ತಿನ್ನುತ್ತಾರೆ. ಅಧಿಕ ಕೊಬ್ಬಿನ ತಿಂಡಿಗಳನ್ನು ತಿನ್ನುತ್ತಾರೆ, ಹೆಚ್ಚು ಸೋಡಾ ಕುಡಿಯುತ್ತಾರೆ, ರಾತ್ರಿಯ ಸಮಯದಲ್ಲಿ ಅವರು ಹೆಚ್ಚು ತಿನ್ನುತ್ತಾರೆ ಅಥವಾ ಬೆಳಗ್ಗಿನ ಉಪಹಾರ ಸೇವಿಸುವವರಿಗಿಂತಲೂ ಹೆಚ್ಚು ಬೊಜ್ಜು ದೇಹಿಗಳಾಗಿರುತ್ತಾರೆ.

ಪರಿಶುದ್ಧ ತೈಲದಿಂದ ಅವನನ್ನು ಅಭಿಷೇಕಿಸಿದ್ದೇನೆ.
ನನ್ನ ಹಸ್ತವು ಅವನ ಮೇಲೆ ಸ್ಥಿರವಾಗಿರುವದು (ಕೀರ್ತ. 89:20–21).

ಏನೇ ಆದರೂ, ಮಧುಮೇಹಿಗಳಿಗೆ ಬೆಳಗ್ಗಿನ ಉಪಹಾರ ಬಹಳ ಅವಶ್ಯಕ. ಇನ್ಸುಲಿನ್ ತೆಗೆದುಕೊಳ್ಳುವ ವ್ಯಕ್ತಿ, ಬೆಳಗ್ಗಿನ ಉಪಹಾರ ಸೇವಿಸದಿದ್ದರೆ, ಆ ವ್ಯಕ್ತಿಯಲ್ಲಿ ಹೈಪೋಗ್ಲೆಸೆಮೀಯಾ ಕಾಣಿಸಿಕೊಳ್ಳುವ ಅಪಾಯ ಇದೆ. ಒಂದು ವೇಳೆ ಹಸಿವನ್ನು ನೀಗಿಸಲು ನೀವು ತ್ವರಿತ ಪರಿಣಾಮ ಬೀರುವ ಇನ್ಸುಲಿನ್ ಅನ್ನು ಉಪಯೋಗಿಸಿದರೂ ಸಹ, ಮಧುಮೇಹ ಇರುವವರು ಬೆಳಗ್ಗಿನ ಉಪಹಾರವನ್ನು ತಪ್ಪಿಸಿಕೊಳ್ಳಲೇಬಾರದು.

ಒಂದು ಒಳ್ಳೆಯ ಉಪಹಾರವು ಆಹಾರಕ್ರಮಕ್ಕೆ ಅವಶ್ಯಕ ಪೋಷಕಾಂಶಗಳನ್ನು ಸೇರಿಸುವಲ್ಲಿ ಸಹಾಯ ಮಾಡುತ್ತದೆ. ಬಹುಶ: ದಿನದ ಉಳಿದ ಸಮಯಗಳಲ್ಲಿ ಇದನ್ನು ಸರಿದೂಗಿಸುವುದು ಸಾಧ್ಯವಾಗದೇ ಇರಬಹುದು.

ಬೆಳಗ್ಗಿನ ಉಪಹಾರ ಅನ್ನುವುದು ನಿಜವಾಗಿಯೂ ದಿನದ ಪ್ರಮುಖ ಆಹಾರ. ಒಂದು ಹೊಸ ದಿನವನ್ನು ಆರಂಭಿಸಲು ಇದು ನಿಮಗೆ ಶಕ್ತಿಯನ್ನು ನೀಡುವುದಷ್ಟೇ ಅಲ್ಲ, ಬೆಳಗ್ಗಿನ ಉಪಹಾರಕ್ಕೂ ದೇಹತೂಕ ನಿಯಂತ್ರಣ ಮತ್ತು ಕಾರ್ಯನಿರ್ವಹಣೆಯು ಉತ್ತಮಗೊಳ್ಳುವ ರೀತಿಯಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಅನೇಕ ಅಂಶಗಳಿಗೂ ಸಂಬಂಧವಿದೆ.

ಆರೋಗ್ಯಕರ ಉಪಹಾರವನ್ನು ಸೇವಿಸುವುದರಿಂದ, ಅವು ನಿಮಗೆ ಹೀಗೆ ಸಹಾಯ ಮಾಡಬಹುದು.

ಹೆಚ್ಚು ಪೋಷಣಾಭರಿತವಾದ ಆಹಾರದಲ್ಲಿ, ಪೋಷಕಾಂಶಗಳು, ವಿಟಾಮಿನ್‌ಗಳು ಮತ್ತು ಖನಿಜಾಂಶಗಳು ಹೇರಳವಾಗಿರುತ್ತವೆ.

ಶಾಲಾಕೊಠಡಿಯಲ್ಲಿ ಮಕ್ಕಳ ಮತ್ತು ಸಭಾಕೊಠಡಿಯಲ್ಲಿ ಉದ್ಯೋಗಿಗಳ ಏಕಾಗ್ರತೆ ಮತ್ತು ಕಾರ್ಯನಿರ್ವಹಣೆಯನ್ನು ಉತ್ತಮಪಡಿಸುತ್ತದೆ.

ದೈಹಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳಲು ಹೆಚ್ಚು ಶಕ್ತಿ ಮತ್ತು ಸಾಮರ್ಥ್ಯವನ್ನು ಒದಗಿಸುತ್ತದೆ.

ಕೊಲೆಸ್ಟ್ರಾಲ್ ಮಟ್ಟವನ್ನು ತಗ್ಗಿಸುತ್ತದೆ, ಕೆಲಸ ಮಾಡುತ್ತಿರುವಾಗಲೂ ತಿನ್ನಬಹುದು.

ದಿನದ ಮೊದಲು ಊಟವನ್ನು ತಪ್ಪಿಸಿಕೊಳ್ಳುವುದರಿಂದ ವ್ಯಕ್ತಿಯಲ್ಲಿ ಹಸಿವು ಮತ್ತು ಆಯಾಸ ಕಾಣಿಸಿಕೊಳ್ಳುತ್ತದೆ. ಒಂದುವೇಳೆ ಮನೆಯಲ್ಲಿ ಉಪಹಾರವನ್ನು ಸೇವಿಸಲು ಸಾಧ್ಯವಾಗದಿದ್ದರೆ, ಕಟ್ಟಿ.

**ಮಕ್ಕಳಿಗೆ ಬೆಳಗ್ಗಿನ ಉಪಹಾರ ಯಾಕೆ ಅವಶ್ಯಕ ?**

ತಮ್ಮ ಕಾರ್ಯಚಟುವಟಿಕೆಗಾಗಿ ಹಿರಿಯರು ಪ್ರತಿದಿನವೂ ಉಪಹಾರವನ್ನು ಸೇವಿಸುವುದು ಎಷ್ಟು ಅವಶ್ಯಕವೋ, ಮಕ್ಕಳಿಗೆ ಉಪಹಾರದ ಅವಶ್ಯಕತೆ ಇನ್ನೂ ಹೆಚ್ಚು. ಆಹಾರದ ಮೂಲಕ, ಅವರ ಬೆಳೆಯುತ್ತಿರುವ ದೇಹ ಮತ್ತು ಮೆದುಳಿಗೆ ನಿರಂತರವಾಗಿ ಶಕ್ತಿ ತುಂಬಬೇಕಾಗುವುದು. ಮಕ್ಕಳು ಬೆಳಗ್ಗಿನ ಉಪಹಾರವನ್ನು ತಪ್ಪಿಸಿಕೊಂಡರೆ, ಅವರು ಉತ್ತಮ ಚಟುವಟಿಕೆಯಿಂದ ಇರಲು ಸಾಧ್ಯ ಆಗುವುದಿಲ್ಲ. ಬೆಳಗ್ಗಿನ ಚಟುವಟಿಕೆಗಳು ಮಾನಸಿಕ ನಿರ್ವಹಣೆ ಮತ್ತು ಏಕಾಗ್ರತೆಗೆ ಉಪಹಾರ ಅತ್ಯಂತ ಅವಶ್ಯಕ. ಬೆಳಗ್ಗಿನ ಉಪಹಾರವನ್ನು ಸೇವಿಸದೇ ಇರುವ ಮಕ್ಕಳು ಹೆಚ್ಚು ಸೋಮಾರಿಗಳಾಗಿರುತ್ತಾರೆ ಮತ್ತು ಏಕಾಗ್ರತೆಯ ಕೊರತೆಯಿಂದ ಬಳಲುತ್ತಾರೆ. ತಮ್ಮ ಬೆಳಗ್ಗಿನ ಚಟುವಟಿಕೆಗಳನ್ನು ನಡೆಸಲು ಅವರಲ್ಲಿ ಶಕ್ತಿಯ ಕೊರತೆ ಕಾಡುತ್ತದೆ. ಒಳ್ಳೆಯ ಪೋಷಣೆಯನ್ನು ಪಡೆದ ಮಕ್ಕಳಿಗೆ ಹೋಲಿಸಿದರೆ, ಬೆಳಗ್ಗೆ ಹಸಿದ ಹೊಟ್ಟೆಯಿಂದ ಶಾಲೆಗೆ ಬರುವ ಮಕ್ಕಳು, ಕಲಿಕೆಗೆ ಸಂಬಂಧಿಸಿದಂತೆ ಹೆಚ್ಚು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಬೆಳಗ್ಗಿನ ಉಪಹಾರವನ್ನು ಸೇವಿಸುವ ಮಕ್ಕಳು ತಮ್ಮ ಶಾಲಾ ಚಟುವಟಿಕೆಗಳಲ್ಲಿ ಉತ್ತಮ ನಿರ್ವಹಣೆಯನ್ನು ತೋರಿಸುತ್ತಾರೆ. ಕ್ರೀಡೆ ಮತ್ತು ಇತರ ದೈಹಿಕ ಚಟುವಟಿಕೆಗಳಲ್ಲಿ ಅವರು ವಿಶೇಷ ಸಾಮರ್ಥ್ಯವನ್ನು ತೋರಿಸುತ್ತಾರೆ. ಇಷ್ಟೇ ಅಲ್ಲದೆ, ಬೆಳಗ್ಗೆ ನಿತ್ಯವೂ ಉಪಹಾರವನ್ನು ಸೇವಿಸುವ ಮಕ್ಕಳಲ್ಲಿ ಶೈಕ್ಷಣಿಕ ಯಶಸ್ವಿಗೆ ಅವಶ್ಯಕತೆ ಇರುವ ಮಾನಸಿಕ ಮತ್ತು ದೈಹಿಕ ಬೆಳವಣಿಗೆ, ವಿಕಸನ, ಧನಾತ್ಮಕ ಜಾಗೃತಿ, ಚುರುಕುತನ, ಪ್ರಮಾಣಿಕ ಸಾಧನೆಯ ಪರೀಕ್ಷೆಗಳಲ್ಲಿ ಉತ್ತಮ ನಿರ್ವಹಣೆ ಈ ಎಲ್ಲ ಅಂಶಗಳು ಖಚಿತವಾಗಿ ಉತ್ತಮ ಮಟ್ಟದಲ್ಲಿರುತ್ತವೆ.

**ಸಂಗ್ರಹ.**

## ಡಿಜಿಎಮ್ ಬೇತೇಲ್ ಅಂಕಣ

- **ಸೆಪ್ಟಂಬರ್ 30 ರಿಂದ ಅಕ್ಟೋಬರ್ 3ರವರೆಗೆ ನಡೆಸಲ್ಪಟ್ಟ ಪವರ್ ಕ್ಯಾಂಪ್ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಸಲ್ಪಟ್ಟಿತು.**
- **12ನೇ ಕೆರೀತ್ ಕೂಟವು ಕರ್ತನ ಕೃಪೆಯಿಂದ ಒಳ್ಳೇ ರೀತಿಯಲ್ಲಿ ನಡೆಸಲ್ಪಟ್ಟಿತು.**

ಯಾವಾಗಲೂ ನಿನ್ನ ನಾಮದಲ್ಲಿ ಆನಂದಿಸುತ್ತಾರೆ;
ನಿನ್ನ ನೀತಿಯಿಂದ ಏಳಿಗೆ ಹೊಂದುತ್ತಾರೆ (ಕೀರ್ತ. 89:16).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.
**ಮೊಬೈಲ್ : 0091 9902334941**

## ನಿಮ್ಮಗೆಲ್ಲಾ ಸಂತಸ ಸುದ್ಧಿ

# VOICE OF GOD
## (ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

### ಆಶ್ರಮದ ಅವಶ್ಯಕತೆಗಳು

1. ವಾಷಿಂಗ್ ಮಿಷನ್ (500ಕೆ.ಜಿ.).
2. ಕುಡಿಯುವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
**0091 9902334941, 0091 8202002781, 0091 9964070654**

ಕರ್ತನೇ, ನನ್ನ ದೇವರೇ, ಮನಃಪೂರ್ವಕವಾಗಿ ನಿನ್ನನ್ನು ಕೊಂಡಾಡುವೆನು;
ಎಂದೆಂದಿಗೂ ನಿನ್ನ ನಾಮವನ್ನು ಘನಪಡಿಸುವೆನು (ಕೀರ್ತ. 86:13).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

2) ಆದಿ. 3:7–8 ದೇವರ ಮತ್ತು ದೇವರ ಮಕ್ಕಳ ಅನ್ಯೋನ್ಯತೆಯನ್ನು ಮುರಿಯುವುದಕ್ಕಾಗಿ ಸೈತಾನನು ಶೋಧನೆ ತರುತ್ತಾನೆ. ಕೂಡಲೇ ಅವರಿಬ್ಬರ ಕಣ್ಣುಗಳು ತೆರೆದವು. ತಾವು ಬೆತ್ತಲೆಯಾಗಿದ್ದೇವೆಂದು ತಿಳಿದು ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಂಡರು. ತರುವಾಯ ಯೆಹೋವ ದೇವರು ಸಂಜೆಯ ತಂಗಾಳಿಯಲ್ಲಿ ತೋಟದೊಳಗೆ ಸಂಚರಿಸುತ್ತಿರುವಾಗ ಆ ಸ್ತ್ರೀ ಪುರುಷರು ಆತನ ಸಪ್ಪಳವನ್ನು ಕೇಳಿ ಆತನಿಗೆ ಕಾಣಿಸಬಾರದೆಂದು ತೋಟದ ಮರಗಳ ಹಿಂದೆ ಅಡಗಿಕೊಂಡರು. ಸೈತಾನನು ತಂದ ಶೋಧನೆಯಲ್ಲಿ ಆದಾಮ ಹವ್ವರು ಬಿದ್ದರು. ಅದರಿಂದ ಆತ್ಮದಲ್ಲಿ ಸತ್ತು ಹೋದದ್ದು ಮಾತ್ರವಲ್ಲದೆ ಪರಿಶುದ್ಧ ದೇವರ ಅನ್ಯೋನ್ಯತೆಯನ್ನು ಕಳಕೊಂಡರು.

ಪ್ರಿಯ ಸಹೋದರ, ಸಹೋದರಿಯೇ ನೀನು ರಕ್ಷಣೆ ಹೊಂದಿದ್ದರೂ ಆರಾಧನೆಗೆ ಆಲಯಕ್ಕೆ ಹೋಗುವಂಥಹ ವ್ಯಕ್ತಿಯಾಗಿದ್ದರೂ ಕೂಡ ಸೈತಾನನು ನಿನ್ನ ಜೀವಿತದಲ್ಲಿ ತಂದ ಶೋಧನೆಯ ನಿಮಿತ್ತವಾಗಿ ಪಾಪದಲ್ಲಿ ಬಿದ್ದು ಕರ್ತನ ಅನ್ಯೋನ್ಯತೆಯನ್ನು ಕಳಕೊಂಡ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದಿಯೋ? ಅದರಲ್ಲೇ ಬಿದ್ದಿರಲು ಇಷ್ಟಪಡಬೇಡ. "ಆದದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೋ. ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು. ನೀನು ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ ನಾನು ಬಂದು ನಿನ್ನ ದೀಪಸ್ತಂಭವನ್ನು ಅದರ ಸ್ಥಳದಿಂದ ತೆಗೆದು ಹಾಕುವೆನು" (ಪ್ರಕ. 2:5). ಪ್ರಕಟನೆಯಲ್ಲಿ ಕರ್ತನು ಎಚ್ಚರಿಸುತ್ತಿದ್ದಾನೆ, ಮಾನಸಾಂತರಪಡಲು ಅವಕಾಶ ಕೊಟ್ಟಿದ್ದಾನೆ. ನಾವು ಪಾಪದಲ್ಲೇ ಮುಂದುವರಿಯುವುದಾದರೆ ಕರ್ತನ ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಪ್ರಕ. 3:19 ರಲ್ಲಿ ನಾನು ಯಾರಾರನ್ನು ಪ್ರೀತಿಸುತ್ತೇನೋ ಅವರನ್ನು ಗದರಿಸುತ್ತೇನೆ ಮತ್ತು ಶಿಕ್ಷಿಸುತ್ತೇನೆ. ನನ್ನ ಪ್ರೀತಿಯ ಸಹೋದರ/ಸಹೋದರಿ ಯಾವುದೇ ಒಂದು ಶೋಧನೆಗೆ ಒಳಗಾಗಿ ಪಾಪಮಾಡಿ ಕರ್ತನ ಅನ್ಯೋನ್ಯತೆ ನೀನು ಕಳಕೊಂಡಿರುವುದಾದರೆ ತಡಮಾಡದೇ ಮಾನಸಾಂತರಪಟ್ಟು ಕರ್ತನ ಬಳಿ ಕ್ಷಮಾಪಣೆ ಕೇಳಿಕೊಂಡು ಪಾಪದ ನಿಮಿತ್ತವಾಗಿ ಕಳಕೊಂಡಂತಹ ಅನ್ಯೋನ್ಯತೆಯನ್ನು ಪುನ: ಹೊಂದಿಕೋ. ನಿನ್ನ ಹಿಂತಿರುಗುವಿಕೆಯನ್ನು ಕರ್ತನು ಎದುರುನೋಡುತ್ತಿದ್ದಾನೆ. ಕರ್ತನು ನಿನ್ನನ್ನು ಇನ್ನು ಕೂಡ ಪ್ರೀತಿಸುತ್ತಿದ್ದಾನೆ. ನೀನು ಪಾಪ ಮಾಡುವುದಕ್ಕೆ ಮುಂಚೆ ಇದ್ದ ಅದೇ ಅನ್ಯೂನ್ಯತೆಯಲ್ಲಿ ಕರ್ತನ ಜೊತೆಯಲ್ಲಿ ಮುಂದುವರಿಯಬಹುದು. ಇಂದು ಕರ್ತನ ಅನ್ಯೋನ್ಯತೆಗೆ ಬರಲು ಏನು ಅಡ್ಡಿ ಇದೆ ಅದನ್ನು ಮೊದಲು ತೆಗೆದುಹಾಕು.

"ಇಗೋ, ಯೆಹೋವನಹಸ್ತವು ರಕ್ಷಿಸಲಾರದಂತೆ ಮೋಟುಗೈಯಲ್ಲ; ಆತನ ಕಿವಿಯು ಕೇಳಲಾರದ ಹಾಗೆ ಕಿವುಡಲ್ಲ. ಆದರೆ ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ; ನಿಮ್ಮ ಪಾಪಗಳೇ ಆತನು ಕೇಳಲಾರದಂತೆ ಆತನ ಮುಖಕ್ಕೆ ಅಡ್ಡವಾಗಿವೆ" (ಯೆಶಾ. 59:1–2).

"ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸಿರಿ, ಆತನು ಸಮೀಪದಲ್ಲಿರುವಾಗ ಆತನಿಗೆ ಬಿನ್ನಹಮಾಡಿರಿ. ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ, ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ; ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ, ಆತನು ಅವನನ್ನು ಕರುಣಿಸುವನು; ನಮ್ಮ ದೇವರನ್ನು ಆಶ್ರಯಿಸಲಿ, ಆತನು ಮಹಾ ಕೃಪೆಯಿಂದ ಕ್ಷಮಿಸುವನು" (ಯೆಶಾ. 55:6–7).

ಮಾನಸಾಂತರದೊಂದಿಗೆ ದೇವ ಮಗುವೇ, ಕರ್ತನ ಬಳಿಗೆ ಓಡಿ ಬಾ. ಹೊಸ ಆರಂಭವನ್ನು ನೀನು ಕರ್ತನಲ್ಲಿ ಆನಂದಿಸಬಹುದು. ಕರ್ತನು ನಿನ್ನನ್ನು ಪ್ರೀತಿಸುತ್ತಾನೆ, ಆತನು ನಿನ್ನೊಂದಿಗೆ ಅನ್ಯೋನ್ಯತೆಯನ್ನು ಬಯಸುತ್ತಾನೆ.

3) ಆದಿ. 3:9–20 ದೇವರ ಮಕ್ಕಳು ಶೋಧನೆಗೆ ಒಳಗಾಗಿ ಪಾಪಮಾಡಿ ದೇವರ ಕೋಪಕ್ಕೆ ಒಳಗಾಗ ಬೇಕೆಂದು ಸೈತಾನನು ದೇವರ ಮಕ್ಕಳನ್ನು ಶೋಧನೆಗೆ ಒಳಪಡಿಸುತ್ತಾನೆ. ಆದಿಕಾಂಡ 3 ರಲ್ಲಿ ನಡೆದ ಘಟನೆ ನಮಗೆಲ್ಲರಿಗೂ ತಿಳಿದಿದೆ. ಆದಾಮ ಹವ್ವರು ದೇವರ ಮೇಲೆ ನಂಬಿಕೆ ಇಡುವುದಕ್ಕಿಂತ ಹೆಚ್ಚು ಸೈತಾನನ ಮೇಲೆ ನಂಬಿಕೆ ಇಟ್ಟರು. ದೇವರ ಮಾತನ್ನು ಕೇಳುವುದಕ್ಕಿಂತ ಹೆಚ್ಚು ಸೈತಾನನ ಮಾತನ್ನು ಕೇಳಿದರು. ಇದರಿಂದಾಗಿ ಆದಾಮ ಹವ್ವರ

ನಾನು ನಿನ್ನ ನಾಮದಲ್ಲಿ ಭಯಭಕ್ತಿಯಿಂದಿರುವಂತೆ ಏಕಮನಸ್ಸನ್ನು ಅನುಗ್ರಹಿಸು (ಕೀರ್ತ. 86:11).

ಮೇಲೆ ಮಾತ್ರವಲ್ಲ, ಅವರ ಸಂತತಿಯ ಮೇಲೆ ಶಾಪ ಬಂತು ಎಂಬುದಾಗಿ ನಾವು ಕಾಣಬಹುದು.

ಸೈತಾನನು ಇಂದಿಗೂ ಮನುಷ್ಯನನ್ನು ಮೋಸಪಡಿಸಿ, ಶೋಧಿಸಿ ಪಾಪದಲ್ಲಿ ಬೀಳಿಸಿ, ದೇವರ ಕೋಪಕ್ಕೆ ಒಳಪಡಿಸಿ ಶಾಪಗ್ರಸ್ತನಾಗುವಂತೆ ಮಾಡುತ್ತಿದ್ದಾನೆ.

2 ಸಮು. 11:1–5 ರಲ್ಲಿ ನಡೆದ ಘಟನೆ ನಮಗೆ ಗೊತ್ತಿದೆ. ಯುದ್ಧದ ಸಮಯದಲ್ಲಿ ಯುದ್ಧಕ್ಕೆ ಹೋಗಬೇಕಾದ ದಾವೀದನು ಯೋವಾಬ ಮತ್ತು ತನ್ನ ಸೈನಿಕರನ್ನು ಯುದ್ಧಕ್ಕೆ ಕಳುಹಿಸಿ ತಾನು ಮಾತ್ರ ಯೆರೂಸಲೇಮಿನಲ್ಲಿ ನಿಂತು ವಿಶ್ರಮಿಸಿಕೊಳ್ಳುವುದನ್ನು ನಾವು ಕಾಣುತ್ತೇವೆ. ಅನೇಕ ಸಲ ನಾವು ಸುವಾರ್ತೆ ಸೇವೆ ಮಾಡಬೇಕಾದ ಸಂದರ್ಭದಲ್ಲಿ ಅಲಸ್ಯ ಮಾಡಿ ಮನೆಯಲ್ಲೇ ಉಳಿಯುವುದರಿಂದ ಅನೇಕ ಪಾಪಗಳಿಗೆ ಒಳಗಾಗಿ ಅನೇಕ ನೋವುಗಳಲ್ಲಿ ಹಾದು ಹೋಗಬೇಕಾದ ಪರಿಸ್ಥಿತಿ ಬಂದು ಬಿಡುತ್ತದೆ. "ಯೆಹೋವನು ನೇಮಿಸಿದ ಕೆಲಸದಲ್ಲಿ ಅಲಸ್ಯಗಾರನು ಶಾಪಗ್ರಸ್ತನಾಗಲಿ; ತನ್ನ ಕತ್ತಿಯನ್ನು ರಕ್ತಸುರಿಸದಂತೆ ತಡೆಯುವವನಿಗೆ ಶಾಪ ತಗಲಲಿ" (ಯೆರೆ. 48:10). "ದೇವರ ಮುಂದೆ ಮತ್ತು ಜೀವಿಸುವವರಿಗೂ ಸತ್ತವರಿಗೂ ನ್ಯಾಯ ತೀರಿಸುವುದಕ್ಕೆ ಬರುವ ಕ್ರಿಸ್ತ ಯೇಸುವಿನ ಮುಂದೆ ಆತನ ಪ್ರತ್ಯಕ್ಷತೆಯ ಮೇಲೆಯೂ ಆತನ ರಾಜ್ಯದ ಮೇಲೆಯೂ ಆಣೆಯಿಟ್ಟು ನಾನು ನಿನಗೆ ಖಂಡಿತವಾಗಿ ಹೇಳುವದೇನೆಂದರೆ ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು" (2 ತಿಮೊ. 4:1–2).

ಮುಂದುವರಿಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ದೇಶದ 100 ನಗರಗಳನ್ನು ಸ್ಮಾರ್ಟ್‌ಸಿಟಿಗಳಾಗಿ ರೂಪಿಸುವ ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ ಯೋಜನೆ ಈಗ ಇನ್ನೊಂದು ಹೆಜ್ಜೆ ಮುಂದೆ ಇಟ್ಟಿದೆ. ಸ್ಮಾರ್ಟ್‌ಸಿಟಿ ನಿರೀಕ್ಷೆಯಲ್ಲಿರುವ 88 ನಗರಗಳ ನೀಲನಕ್ಷೆ ರಚಿಸುವ ಸಂಬಂಧ ಕೇಂದ್ರ ಸರಕಾರ 37 ಸಲಹಾ ಸಂಸ್ಥೆಗಳನ್ನು ಆಯ್ಕೆ ಮಾಡಿದೆ. ಈ ಸಲಹಾ ಸಂಸ್ಥೆಗಳು, ಆಯಾ ನಗರಗಳಿಗೆ ತಮ್ಮ ಸ್ಮಾರ್ಟ್‌ಸಿಟಿ ಹೇಗಿರಬೇಕೆಂಬ ಕುರಿತ ನೀಲನಕ್ಷೆ ರೂಪಿಸಿ ಕೊಡಲಿವೆ.
- ಒಂದು ಮಗು ನೀತಿ ಉಲ್ಲಂಘಿಸಿದ ದಂಪತಿಗೆ ಚೀನಾ ಸರ್ಕಾರ 71 ಲಕ್ಷರೂ. ದಂಡ ವಿಧಿಸಿದೆ. ಒಂದೇ ಮಗು ಹೊಂದಬೇಕು ಎಂಬ ನಿಯಮವಿದ್ದರೂ ಈ ದಂಪತಿ ಏಳು ಮಕ್ಕಳನ್ನು ಪಡೆದಿದ್ದರು. ಈ ಹಿಂದೆ ಸರ್ಕಾರ ನೀಡಿದ್ದ ಎಚ್ಚರಿಕೆಯನ್ನೂ ದಂಪತಿ ನಿರ್ಲಕ್ಷಿಸಿದ್ದರು ಎನ್ನಲಾಗಿದೆ.
- ಮಿತಿಮೀರಿ ಏರುತ್ತಿರುವ ಭಯೋತ್ಪಾದನಾ ಚಟುವಟಿಕೆ, ಜತೆಗೆ ಆರ್ಥಿಕ ಹಿನ್ನಡೆ ದಾಖಲಿಸುತ್ತಿದ್ದು, ಪಾಕಿಸ್ತಾನವು ವಿಶ್ವದ ಅತ್ಯಂತ ಅಪಾಯಕಾರಿ ರಾಷ್ಟ್ರವಾಗಿ ಹೊರಹೊಮ್ಮುವ ಸಾಧ್ಯತೆಯಿದೆ ಎಂದು ಅಮೆರಿಕ ಗುಪ್ತಚರ ಇಲಾಖೆಯ ನಿವೃತ್ತ ಅಧಿಕಾರಿ ಕೆವಿನ್ ಹುಲ್ಬರ್ಟ್ ತಿಳಿಸಿದ್ದಾರೆ.
- ಸರಕಾರಿ ಪದವಿ ಕಾಲೇಜುಗಳಲ್ಲಿ ಅಂತಿಮ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಂತಸದ ಸುದ್ದಿ ನಿಮ್ಮದೇ ಆದ ಸ್ವಂತ ಉದ್ದಿಮೆ ಆರಂಭಿಸುವ ಕನಸಿದ್ದರೆ ಅದನ್ನು ಸಾಕಾರಗೊಳಿಸಿಕೊಳ್ಳುವ ಕಾಲ ಸನ್ನಿಹಿತವಾಗಿದೆ.
- ಕೆಲ ವರ್ಷಗಳ ಹಿಂದಷ್ಟೇ ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬ ಹೆಗ್ಗಳಿಕೆ ಹೊಂದಿದ್ದ ಚೀನದಲ್ಲಿ ಪರಿಸ್ಥಿತಿ ಇದೀಗ ಪೂರ್ಣ ಉಲ್ಟಾ. ಅಲ್ಲಿ ಆರ್ಥಿಕತೆ ಕುಸಿದು ಹೋಗಿದ್ದು, ಅದನ್ನು ಸರಿಪಡಿಸಲು ಸರಕಾರ ಇನ್ನಿಲ್ಲದ ಹರಸಾಹಸಗಳನ್ನೆಲ್ಲಾ ಮಾಡುತ್ತಿದೆ.
- ತೆವಳುವ ಮೀನು, ಮಳೆ ಬಂದರೆ ಸೀನುವ ಮಂಗ ಸೇರಿ 200 ಹೊಸ ಪ್ರಭೇದಗಳು ಇತ್ತೀಚಿನ ವರ್ಷಗಳಲ್ಲಿ ಪೂರ್ವ ಹಿಮಾಲಯ ಪ್ರದೇಶಗಳಲ್ಲಿ ಪತ್ತೆಯಾಗಿವೆ.
- ದಿಲ್ಲಿಶಾಸಕರ ಸಂಬಳ ಮತ್ತು ಭತ್ತೆ ಹೆಚ್ಚಳಕ್ಕೆ ತಜ್ಞರ ಸಮಿತಿ

ಶಿಫಾರಸು ಮಾಡಿದ್ದು, ಒಂದೊಮ್ಮೆ ಶಿಫಾರಸು ಅಂಗೀಕಾರಗೊಂಡರೆ ವೇತನ ಮತ್ತು ಭತ್ತೆ ಶೇ. 400ರಷ್ಟು ಹೆಚ್ಚಳವಾಗಲಿದೆ. ಅಂದರೆ ಇದೀಗ 88 ಸಾವಿರ ರೂ. ಇರುವ ಶಾಸಕರ ಸಂಬಳ ಮತ್ತು ಭತ್ತೆ 2.10 ಲಕ್ಷರೂ. ಆಗಲಿದೆ.

- ಮಂಗಳನ ಅಂಗಳದಲ್ಲಿ ವಾಸಿಸುವ ಮನುಷ್ಯನ ಕನಸು ಸಧ್ಯದಲ್ಲೇ ನನಸಾಗಲಿದೆ. ಕೆಂಪುಗ್ರಹದ ಮೇಲೆ ಮಾನವನ ಹೆಜ್ಜೆ ಮೂಡಿಸುವ ಸಮಯ ಹತ್ತಿರ ಬಂದಿದೆ ಎಂದು ನಾಸಾ ಹೇಳಿದೆ. ವರ್ಷಗಳ ಸಂಶೋಧನೆಯ ಫಲವಾಗಿ 2030ರೊಳಗೆ ಮಂಗಳನ ಮೇಲೆ ಭೂಮಿಯ ಸ್ವತಂತ್ರ ವಸಾಹತನ್ನು ಹೊಂದಲಿದ್ದೇವೆ.
- ಸುಮಾರು 2.5 ಕಿ.ಮೀ. ವ್ಯಾಸ ಹೊಂದಿರುವ ಆಕಾಶಕಾಯವೊಂದು ಭೂಮಿಗೆ ಅಪ್ಪಳಿಸಲಿದ್ದು, ಅದರಿಂದ ಭಾರಿ ಪ್ರಮಾಣದ ಹಾನಿಯಾಗಲಿದೆ ಎಂಬ ವದಂತಿಗಳೆಲ್ಲ ಸುಳ್ಳು ಎಂದು ನಾಸಾ ಹೇಳಿದೆ.
- ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ಯುದ್ಧ ಪೀಡಿತ ಪಶ್ಚಿಮ ಏಷ್ಯಾದ ಮೂರು ರಾಷ್ಟ್ರಗಳಿಗೆ ಆರು ದಿನದ ಪ್ರವಾಸ ಕೈಗೊಂಡಿದ್ದು, ಜೋರ್ಡಾನ್‌ಗೆ ಬಂದಿಳಿದರು. ಜೋರ್ಡಾನ್ ಅಲ್ಲದೇ ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ರಾಷ್ಟ್ರಗಳಿಗೆ ಭೇಟಿ ನೀಡುವ ಕಾರ್ಯಕ್ರಮವಿದೆ.

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

“ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು” (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ನೀತಿಯು ಆತನ ಮುಂದೆ ಹೋಗುತ್ತಾ ನಾವು ಆತನ ಹೆಜ್ಜೆ ಹಿಡಿದು ನಡೆಯುವಂತೆ ದಾರಿ ಮಾಡುವದು (ಕೀರ್ತ. ೮೫:೧೩).

ಕರ್ತನಲ್ಲಿ ಪ್ರಿಯ ಸಭಾಪಾಲಕರೇ, ಸುವಾರ್ತಿಕರೇ ಹಾಗೂ ಸಹೋದರ/ಸಹೋದರಿಯರೇ, ನಿಮ್ಮೆಲ್ಲರಿಗೂ ಕೃಪಾಪೂರ್ಣನಾದ ಯೇಸುಕ್ರಿಸ್ತನ ಹೆಸರಿನಲ್ಲಿ **My Grace Association (R)** ತೀರ್ಥಹಳ್ಳಿಯವರು ತಿಳಿಸುವ ವಂದನೆಗಳು.

ಈ ಮೂಲಕ ನಿಮ್ಮೊಂದಿಗೆ ಹಂಚಿಕೊಳ್ಳುವದೇನೆಂದರೆ ದೇವರ ಕೃಪೆ ಹಾಗೂ ನಿಮ್ಮೆಲ್ಲರ ಪ್ರಾರ್ಥನೆ ಸಹಕಾರದಿಂದಲೂ ದಿನಾಂಕ. 14.10.2015 ರಂದು ಸತ್ಯ ಸುವಾರ್ತ ಮಂದಿರದಲ್ಲಿ **My Grace Association**ನ ಮೊದಲನೇ ವಾರ್ಷಿಕೋತ್ಸವವನ್ನು ನೆರವೇರಿಸಲಾಯಿತು. ಕಳೆದ ಒಂದು ವರ್ಷದಲ್ಲಿ ಈ **My Grace Association**ನಿಂದ ಎರಡು ಸಭೆಗಳಿಗೆ ಸ್ಥಳವನ್ನು ತೆಗೆದುಕೊಳ್ಳಲು ತಲಾ ಒಂದು ಲಕ್ಷ ರೂಪಾಯಿಗಳನ್ನು ನೀಡುವಂತೆ ದೇವರು ಮಾಡಿದ ಸಹಾಯಕ್ಕಾಗಿ ದೇವರಿಗೆ ಸ್ತೋತ್ರ. ಈ ವಾರ್ಷಿಕೋತ್ಸವದ ಸಂದರ್ಭದಲ್ಲಿ 1) **Bro.** ಬಿ. ಯೇಸುದಾಸ್ ಅಧ್ಯಕ್ಷರು, ಜಿಲ್ಲಾ ಒಕ್ಕೂಟ ಶಿವಮೊಗ್ಗ, 2) **Bro.** ಡೇವಿಡ್ ಪಾಲ್‌ರಾಜ್ ಚಿಕ್ಕಮಂಗಳೂರು, 3) **Bro.** ಸೆಲ್ವರಾಜ್ ಅಧ್ಯಕ್ಷರು, ಯು.ಸಿ.ಎ. ಭದ್ರಾವತಿ ಈ 3 ಜನರನ್ನು **My Grace Association** ನಿಂದ ಸನ್ಮಾನಿಸಲಾಯಿತು. ಹಾಗೂ ಈ ಕಾರ್ಯಕ್ರಮದಲ್ಲಿ 5 ಸಾವಿರಕ್ಕಿಂತ ಹೆಚ್ಚಿನ ಹಣ ಸಹಾಯ ಮಾಡಿದಂತವರಿಗೆ ವಿಶೇಷ ಸನ್ಮಾನ ಮಾಡಲಾಯಿತು. ಅನೇಕ ಕ್ರೈಸ್ತ ಸಭಾಪಾಲಕರು, ಸಹೋದರ/ಸಹೋದರಿಯರು ಭಾಗವಹಿಸಿದರು. ಅಪೋಸ್ತಲ ಕಿಂಗ್‌ಸ್ಲಿರವರು ದೇವರ ಸಂದೇಶವನ್ನು ನೀಡಿದರು. **My Grace Association**ನ ಅಧ್ಯಕ್ಷರಾದ ಪಾ॥ ಆರ್. ಆನಂದ್ ಕುಮಾರ್‌ರವರು ಅಧ್ಯಕ್ಷತೆಯನ್ನು ವಹಿಸಿದರು. **My Grace Association**ನ ಕಾರ್ಯದಶೀಯಾದ ಶಿಕರಿಪುರ ಪಾ॥ ಪೌಲ್‌ರಾಜ್ ವೈ.ಜಿ. ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಹಾವೇರಿಯ ಪಾ॥ ಚಂದ್ರಕಾಂತರವರು ವಾರ್ಷಿಕ ವರದಿಯನ್ನು ಓದಿದರು. ಉಡುಪಿಯ **Bro.** ಮಂಜುನಾಥ್‌ರವರು ಹಣಕಾಸಿನ ವಾರ್ಷಿಕ ವರದಿಯನ್ನು ಓದಿದರು.


















**MY GRACE ASSOCIATION SATHYA SUVARTHA MANDIRA SHEEBENAKERE.**
Phone: 9448126044, 9945912111, 9449230408.
SBI Thirthalli Branch. Account name My Grace Association.
A/C No. 34224366877 IFSC. SBIN. 001334 Branch code. 11334.

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091-820 2589070, 0091-820 200 2781
E-mial: dgmofficial@gmail.com

ಅದ್ಭುತಗಳನ್ನು ನಡಿಸುವ ದೇವರು ನೀನೇ;
ಜನಾಂಗಗಳಲ್ಲಿ ಪರಾಕ್ರಮವನ್ನು ತೋರ್ಪಡಿಸಿದಿ (ಕೀರ್ತ. 77:14).

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಆದಕಾರಣ ಕ್ರೈಸ್ತ ವಿಶ್ವಾಸಿಗಳು ಪ್ರಾರ್ಥನೆಯು ಆಶೀರ್ವಾದಗಳನ್ನು ತಿಳಿದುಕೊಂಡವರಾಗಿ ತಮ್ಮ ವೈಯಕ್ತಿಕ ಜೀವನದಲ್ಲಿ ಪ್ರಾರ್ಥನೆಗೆ ಪ್ರಥಮ ಸ್ಥಾನ ಕೊಡುವುದಾದರೆ ಅನೇಕ ಆತ್ಮಗಳನ್ನು ನಾವು ಕರ್ತನಿಗಾಗಿ ಗೆಲ್ಲಲು ಸಾಧ್ಯ ಹಾಗೂ ಆತ್ಮೀಕ ಜೀವಿತದಲ್ಲಿ ಬಲಹೀನರಾಗದೆ ಬಲಹೊಂದಬೇಕು. ಆಗ ಯಾವುದೇ ಕಾರಣಕ್ಕೂ ನಮ್ಮ ಜೀವಿತದಲ್ಲಿ ಹಿಂಜಾರುವಿಕೆಗೆ ಅವಕಾಶವಾಗುವುದಿಲ್ಲ.

ಒಂದು ವೇಳೆ ನಮ್ಮ ಜೀವಿತದಲ್ಲಿ ಪ್ರಾರ್ಥನೆಗೆ ಪ್ರಾಮುಖ್ಯತೆ ಕೊಡದೆ ಹೋಗಿದ್ದರೆ ಈ ಸಮಯದಲ್ಲಿ ಪಶ್ಚಾತ್ತಾಪಪಟ್ಟು ಕರ್ತನಾದ ಯೇಸುಕ್ರಿಸ್ತನ ಬಳಿಗೆ ಬಂದು ಕ್ಷಮೆ ಕೇಳಿ ಕೊಳ್ಳೋಣ. ಆತನು ನಾವು ಕಳಕೊಂಡ ಪ್ರಾರ್ಥನಾ ಜೀವಿತವನ್ನು ನಮಗೆ ತಿರುಗಿ ಕೊಟ್ಟು ಪುನರ್ ಸ್ಥಾಪಿಸಲು ಶಕ್ತನಾಗಿದ್ದಾನೆ.

## ಮಹಿಳೆಯರ ಸ್ವರ

2) **ಜೀವಿತದಲ್ಲಿ ಎಲ್ಲಾ ಸಮಸ್ಯೆಗಳಿಂದ ಬಿಡುಗಡೆ ಹೊಂದಿ ಹಾಯಾಗಿರುವಂಥ ಜೀವಿತ :–** ಇಸ್ರಾಯೇಲ್ಯರ ಜೀವಿತವನ್ನು ಸೂಕ್ಷ್ಮವಾಗಿ ನಾವು ಗಮನಿಸುವುದಾದರೆ ಅವರ ಜೀವಿತದಲ್ಲಿ ಕಷ್ಟ ಸಂಕಟಗಳು ಬರುವಾಗ ದೇವರಿಗೆ ಮೊರೆ ಇಡುತ್ತಿದ್ದರು. ದೇವರು ಅವರ ಮೊರೆ ಕೇಳಿ ಬಿಡುಗಡೆ ಕೊಟ್ಟಾಗ ಪುನ: ಅದೇ ಪಾಪದಲ್ಲಿ ಬೀಳುತ್ತಿದ್ದರು. ಒಬ್ಬ ಕ್ರೈಸ್ತ ವಿಶ್ವಾಸಿಯ ಜೀವಿತದಲ್ಲಿ ಕಷ್ಟ ಸಂಕಟಗಳು ಬರುವುದು ಒಳ್ಳೆಯದಕೋಸ್ಕರವೇ. ನಮ್ಮ ಜೀವಿತದಲ್ಲಿ ಎಲ್ಲಿಯವರೆಗೆ ಕಷ್ಟ ಸಂಕಟಗಳು ಇರುತ್ತವೆಯೋ ಅಷ್ಟು ದೇವರೊಂದಿಗೆ ನಡೆಯಲು, ದೇವರನ್ನು ಹುಡುಕಲು ಸಹಾಯವಾಗುತ್ತದೆ. ಅನೇಕರು ಕಷ್ಟ ಸಂಕಟಗಳು ಬರುವಾಗ ತುಂಬಾ ಪ್ರಾರ್ಥನೆ ಮಾಡುತ್ತಾರೆ, ಉಪವಾಸ ಮಾಡುತ್ತಾರೆ, ಅನೇಕ ಪ್ರಾರ್ಥನಾ ಕೂಟ, ಉಜ್ಜೀವನ ಕೂಟ, ವಿಶೇಷ ಕೂಟಗಳನ್ನು ಹುಡುಕಿ ಹೋಗುತ್ತಾರೆ. ರಾತ್ರಿ, ರಾತ್ರಿಗಳಲ್ಲಿ ಪ್ರಾರ್ಥನೆಯಲ್ಲಿ ಸಮಯ ಕಳೆಯುತ್ತಾರೆ. ಪ್ರತಿಯೊಬ್ಬ ಸಹ ವಿಶ್ವಾಸಿಗಳಿಗೂ, ದೇವ ಸೇವಕರಿಗೂ 24 ಘಂಟೆ ಪ್ರಾರ್ಥನಾ ಗೋಪುರಗಳಿಗೂ ತಮ್ಮ ಪ್ರಾರ್ಥನಾ ಕೋರಿಕೆಗಳನ್ನು ಕಳುಹಿಸುತ್ತಾರೆ. ಯಾವಾಗ ದೇವರು ಅವರ ಪ್ರಾರ್ಥನೆಗಳನ್ನು ಕೇಳಿ ಬಿಡುಗಡೆ ಕೊಟ್ಟನೋ ಆಗಲೇ ಬಿಡುಗಡೆ ಮಾಡಿದ ದೇವರನ್ನು ಮರೆತು ಬಿಡುತ್ತಾರೆ. "ನನ್ನ ಮನವೇ, ಯೆಹೋವನನ್ನು ಕೊಂಡಾಡು ನನ್ನ ಸರ್ವೇಂದ್ರಿಯಗಳೇ, ಆತನ ಪವಿತ್ರ ನಾಮವನ್ನು ಕೀರ್ತಿಸಿರಿ. ನನ್ನ ಮನವೇ ಯೆಹೋವನನ್ನು ಕೊಂಡಾಡು; ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯಬೇಡ" (ಕೀರ್ತ. 103:1–2).

**ಇದರಿಂದ ನಾವು ತಿಳಿದುಕೊಳ್ಳತಕ್ಕದ್ದು**

1. ನಮ್ಮ ಜೀವಿತದಲ್ಲಿ ಕಷ್ಟ ಸಂಕಟಗಳು ಇರುವುದು ಅದು ನಮ್ಮ ಒಳ್ಳೇಯದಕ್ಕಾಗಿ
2. ನಮ್ಮ ಜೀವಿತದಲ್ಲಿ ಶರೀರದಲ್ಲಿ ನೋವು, ಸಮಸ್ಯೆ ಇರುವುದು ಒಳ್ಳೇದಕ್ಕಾಗಿ
3. ನಮ್ಮಲ್ಲಿ ಹೆಚ್ಚು ಹಣ ಇಲ್ಲದೇ ಇರುವಂತದ್ದು ಒಳ್ಳೇದಕ್ಕಾಗಿ
4. ನಮಗೆ ಎಲ್ಲಾ ಸೌಲಭ್ಯಗಳು ಒಂದೇ ಸಲ ಸಿಗದೇ ಇರುವುದು ಒಳ್ಳೇದಕ್ಕಾಗಿ
5. ಕೆಲವು ಪ್ರಾರ್ಥನಾ ಕೋರಿಕೆಗಳಿಗೆ ತಕ್ಷಣ ಉತ್ತರ ಸಿಗದೇ ಇರುವುದು ಒಳ್ಳೇದಕ್ಕಾಗಿ
6. ನಮ್ಮ ಮೇಲಿನ ಅಧಿಕಾರಿಗಳು ನಮ್ಮನ್ನು ತೊಂದರೆ ಪಡಿಸುವುದು ಒಳ್ಳೇದಕ್ಕಾಗಿ
7. ಎಲ್ಲರಿಂದ ತಿರಸ್ಕರಿಸಲ್ಪಟ್ಟ ಅನುಭವದಲ್ಲಿ ಹೋಗುವುದು ಒಳ್ಳೇದಕ್ಕಾಗಿ.

"ನಿನ್ನಿಂದ ಎರಡು ವರಗಳನ್ನು ಬೇಡಿಕೊಂಡಿದ್ದೇನೆ; ಅನುಗ್ರಹಿಸದಿರಬೇಡ, ನಾನು ಸಾಯುವುದರೊಳಗಾಗಿ ಅವುಗಳನ್ನು ಕೈಗೂಡಿಸು. ನನ್ನಿಂದ ಕಪಟವನ್ನೂ, ಸುಳ್ಳು ಮಾತನ್ನೂ ತೊಲಗಿಸು, ಬಡತನವನ್ನಾಗಲಿ ಐಶ್ವರ್ಯವನ್ನಾಗಲಿ ಕೊಡದೆ ನನಗೆ ತಕ್ಕಷ್ಟು ಆಹಾರವನ್ನು ಭೋಜನ ಮಾಡಿಸು. ಹಾಗಾಗದೇ ಹೊಟ್ಟೆ ತುಂಬಿದವನಾದರೆ ಯೆಹೋವನು ಯಾರೋ ಎಂದು ನಿನ್ನನ್ನು ತಿರಸ್ಕರಿಸೇನು; ಬಡವನಾದರೆ ಕಳ್ಳತನ ಮಾಡಿ ನನ್ನ ದೇವರಾದ ನಿನ್ನ ಹೆಸರನ್ನು ಅಯೋಗ್ಯವಾಗಿ ಎತ್ತೇನು" (ಜ್ಞಾನೋ. 30:7–9).

ಕಷ್ಟ ದು:ಖ, ವೇದನೆಗಳು ಬರುವಾಗ ದೇವರನ್ನು ಹೇಗೆ ಹುಡುಕಿ ಸೇವಿಸುತ್ತಿದ್ದೇವೋ ಹಾಗೆಯೇ ನಮ್ಮ ಒಳ್ಳೇಯ ಸಮಯಗಳಲ್ಲಿ ದೇವರನ್ನು ಹುಡುಕಬೇಕು.

ಅನೇಕರು ಕಷ್ಟ ಸಂಕಷ್ಟದಲ್ಲಿರುವಾಗ ತುಂಬಾ ಆತ್ಮಭಾರ ಇರುತ್ತದೆ. ಕುಟುಂಬದವರು ರಕ್ಷಣೆ ಹೊಂದಬೇಕು, ಸ್ನೇಹಿತರು ರಕ್ಷಣೆ ಹೊಂದಬೇಕು, ನೆರೆಕೆರೆಯವರೂ ರಕ್ಷಣೆ ಹೊಂದಬೇಕೆಂದು ಸತತವಾಗಿ ಅವರಿಗಾಗಿ ಪ್ರಾರ್ಥಿಸುವುದು, ಅವರಿಗೆ ಸುವಾರ್ತೆ ಕೊಡಲು ಸಮಯವನ್ನು ಪ್ರತ್ಯೇಕಿಸುವುದು ಎಲ್ಲವೂ ಇರುತ್ತದೆ. ಆದರೆ ಯಾವಾಗ ಸಮಸ್ಯೆಗಳಿಂದ ಬಿಡುಗಡೆ ಹೊಂದಿ ಒಂದು ಆರ್ಥಿಕವಾಗಿ ಉನ್ನತ ಸ್ಥಿತಿಗೆ ಬರುತ್ತಾರೋ ಅವಾಗ ಆತ್ಮಭಾರ, ಪ್ರಾರ್ಥನಾ ಜೀವಿತ, ದೇವರ ಪ್ರೀತಿ ಎಲ್ಲವನ್ನು ಮರೆತು ಕ್ರಿಸ್ತನ ನಂಬಿಕೆಯಲ್ಲಿ ಹಿಂಜರಿದ ಅನುಭವಕ್ಕೆ ಬಂದು ಬಿಡುತ್ತಾರೆ.

ಸತ್ಯವೇದದಲ್ಲಿ ನಿಮಗೆ 2 ದುಷ್ಟಾಂತಗಳನ್ನು ತೋರಿಸಲು ಇಷ್ಟಪಡುತ್ತೇನೆ. "ರೆಹಬ್ಬಾಮನು ತನ್ನ ರಾಜ್ಯಾಧಿಕಾರವನ್ನು

ದೇವರೇ, ನಿನ್ನ ಮಾರ್ಗವು ಪರಿಶುದ್ಧವಾದದ್ದು. ನಮ್ಮ ದೇವರಂತೆ ಮಹತ್ವವುಳ್ಳ ದೇವರು ಯಾರು? (ಕೀರ್ತ. 77:13).

ಸ್ಥಿರಪಡಿಸಿಕೊಂಡು ಬಲಗೊಂಡ ಮೇಲೆ ಅವನೂ ಅವನ ಪ್ರಜೆಗಳಾದ ಎಲ್ಲಾ ಇಸ್ರಾಯೇಲ್ಯರೂ ಯೆಹೋವನ ಧರ್ಮೋಪದೇಶವನ್ನು ಬಿಟ್ಟು ಬಿಟ್ಟರು; ಅವರು ಯೆಹೋವನಿಗೆ ದ್ರೋಹಿಗಳಾದುದರಿಂದ ಅರಸನಾದ ರೆಹಬ್ಬಾಮನ ಆಳ್ವಿಕೆಯ ಐದನೆಯ ವರುಷದಲ್ಲಿ ಐಗುಪ್ತದ ಅರಸನಾದ ಶೀಶಕನು ಸಾವಿರದ ಇನ್ನೂರು ರಥಗಳನ್ನೂ ಅರವತ್ತು ಸಾವಿರ ಮಂದಿ ರಾಹುತರನ್ನೂ ಐಗುಪ್ತದ ಅಸಂಖ್ಯರಾದ ಲೂಬ್ಯ, ಸುಕ್ಕೀಯ, ಕೂಷ್ಯ ಸೈನಿಕರನ್ನೂ ಕೂಡಿಸಿಕೊಂಡು ಯೆರೂಸಲೇಮಿಗೆ ವಿರೋಧವಾಗಿ ಹೊರಟು ಯೆಹೂದ ದೇಶದ ಕೋಟೆ ಕೊತ್ತಲುಗಳುಳ್ಳ ಪಟ್ಟಣಗಳನ್ನು ಸ್ವಾಧೀನವಮಾಡಿಕೊಂಡ ನಂತರ ಯೆರೂಸಲೇಮನ್ನು ಸಮೀಪಿಸಿದನು. ಆಗ ಪ್ರವಾದಿಯಾದ ಶೆಮಾಯನು ರೆಹಬ್ಬಾಮನ ಬಳಿಗೂ ಶೀಶಕನಿಗೆ ಹೆದರಿ ಯೆರೂಸಲೇಮಿನಲ್ಲಿ ಕೂಡಿದ್ದ ಯೆಹೂದ್ಯ ಪ್ರಧಾನರ ಬಳಿಗೂ ಬಂದು ಅವರಿಗೆ ನೀವು ನನ್ನನ್ನು ಬಿಟ್ಟದ್ದರಿಂದ ನಾನು ನಿಮ್ಮನ್ನು ಶೀಶಕನ ಕೈಯಲ್ಲಿ ಬಿಟ್ಟು ಬಿಟ್ಟಿದ್ದೇನೆಂಬುದಾಗಿ ಯೆಹೋವನು ಅನ್ನುತ್ತಾನೆ ಎಂದು ಹೇಳಿದನು. ಆಗ ಅರಸನೂ ಇಸ್ರಾಯೇಲ್ ಪ್ರಧಾನರೂ ಯೆಹೋವನು ನ್ಯಾಯವಂತನೆಂದು ಒಪ್ಪಿ ತಮ್ಮನ್ನು ತಗ್ಗಿಸಿಕೊಂಡರು. ಯೆಹೋವನು ಇದನ್ನು ನೋಡಿ ಶೆಮಾಯನಿಗೆ ಇವರು ತಮ್ಮನ್ನು ತಗ್ಗಿಸಿಕೊಂಡದ್ದರಿಂದ ಇವರನ್ನು ಸಂಹರಿಸುವುದಿಲ್ಲ; ಸ್ವಲ್ಪ ಕಾಲದಲ್ಲಿಯೇ ಇವರಿಗೆ ರಕ್ಷಣೆಯನ್ನು ಅನುಗ್ರಹಿಸುವೆನು; ಶೀಶಕನ ಮುಖಾಂತರವಾಗಿ ನನ್ನ ರೌದ್ರವನ್ನು ಯೆರೂಸಲೇಮಿನ ಮೇಲೆ ಸುರಿದು ಬಿಡುವುದಿಲ್ಲ"( 2 ಪೂರ್ವ. 12:1–7).

ಮೇಲಿನ ವಚನಗಳನ್ನು ಗಮನಿಸುವುದಾದರೆ ದೇವರು ರೆಹಬ್ಬಾಮ ಮತ್ತು ಇಸ್ರಾಯೇಲ್ಯರನ್ನು ಆಶೀರ್ವದಿಸಿ ಅಭಿವೃದ್ಧಿಪಡಿಸುವವರೆಗೆ ಅವರು ದೇವರನ್ನು ಹೊಂದಿಕೊಂಡಿದ್ದರು. ಯಾವಾಗ ದೇವರು ಅವರನ್ನು ಒಂದು ಉನ್ನತವಾದ ಆಶೀರ್ವಾದದ ಸ್ಥಿತಿಗೆ ತಂದನೋ ಅವರು ದೇವರನ್ನು ಮರೆತರು. ನಮ್ಮನ್ನು ಕೂಡ ನಾವು ಪರೀಕ್ಷೆ ಮಾಡಿಕೊಳ್ಳೋಣ. ಅನೇಕ ಸಲ ಕಷ್ಟ, ದು:ಖ, ವೇದನೆ ಈ ಎಲ್ಲಾ ಅನುಭವದಲ್ಲಿ ಸಭೆಗೆ ಸರಿಯಾಗಿ ಹೋಗುತ್ತೇವೆ. ಉಪವಾಸ ಕೂಟ, ಪ್ರಾರ್ಥನಾ ಕೂಟ ಅಂಥ ಹೋಗುತ್ತೇವೆ, ಸಮಸ್ಯೆ ಬಗೆ ಹರಿದ ಕೂಡಲೆ ಅದೇ ರೀತಿಯಾಗಿ ಯಾಕೆ ನಾವು ಆತ್ಮೀಕ ಜೀವಿತದಲ್ಲಿ ಮುಂದುವರಿಯುವುದಿಲ್ಲ. ದೇವರೊಂದಿಗೆ ಅದೇ ಅನ್ಯೋನ್ಯತೆಯಲ್ಲಿ ಬೆಳೆಯಲು ಇನ್ನೊಂದು ಸಮಸ್ಯೆಗೆ ಕಾಯಬೇಕೇ?

ಇಲ್ಲಿ ದೇವರು ರೆಹಬ್ಬಾಮನನ್ನು ಇಸ್ರಾಯೇಲ ಜನರನ್ನು ಪ್ರೀತಿ ಮಾಡುತ್ತಾ ಇದ್ದದ್ದರಿಂದ ಅವರನ್ನು ಕಳಕೊಳ್ಳಲು ಸಿದ್ಧನಿರಲಿಲ್ಲ. ಅದಕ್ಕಾಗಿ ಐಗುಪ್ತ ದೇಶದ ಅರಸನಾದ ಶೀಶಕನನ್ನು ಇಸ್ರಾಯೇಲರಿಗೆ ವಿರುದ್ಧವಾಗಿ ಎಬ್ಬಿಸುವುದನ್ನು ನೋಡುತ್ತೇವೆ.

ನನ್ನ ಪ್ರಿಯರೇ, ಇಂದು ನೀವು ನಿಮ್ಮ ಜೀವಿತದಲ್ಲಿ ಅನುಭವಿಸುತ್ತಿರುವ ಭಾದೆಗಳು ಒಂದು ವೇಳೆ ದೇವರಿಂದ ದೂರ ಹೋಗಿದ್ದರ ನಿಮಿತ್ತವಾಗಿರಬಹುದು. ನಮ್ಮನ್ನು ಪರೀಕ್ಷಿಸಿ ಕ್ರಮಪಡಿಸಿಕೊಳ್ಳಲು ಇದು ಒಂದು ಉತ್ತಮವಾದ ಸಂದರ್ಭವಾಗಿದೆ.

"ಕಷ್ಟಾನುಭವಕ್ಕಿಂತ ಮುಂಚೆ ತಪ್ಪಿ ಹೋಗುತ್ತಿದ್ದೆನು; ಈಗಲಾದರೋ ನಿನ್ನ ನುಡಿಗಳನ್ನು ಕೈಗೊಳ್ಳುತ್ತೇನೆ" (ಕೀರ್ತ. 119:67). "ಕಷ್ಟಾನುಭವವು ಹಿತಕರವಾಯಿತು; ಅದರಿಂದಲೇ ನಿನ್ನ ನಿಬಂಧನೆಗಳನ್ನು ಕಲಿತೆನು" (ಕೀರ್ತ. 119:71). "ಅವರು ಒಂದು ವೇಳೆ ಬಂಧನಕ್ಕೆ ಸಿಕ್ಕಿ ಬಾಧೆಗಳೆಂಬ ಹಗ್ಗಗಳಿಂದ ಕಟ್ಟಲ್ಪಟ್ಟಿದ್ದರೆ, ಆತನು ಅವರ ದುಷ್ಕೃತ್ಯವನ್ನೂ ಸೊಕ್ಕಿನ ದ್ರೋಹಗಳನ್ನೂ ಅವರಿಗೆ ತೋರಿಸುವನು. ಇದಲ್ಲದೆ ಶಿಕ್ಷಣವನ್ನು ಕೇಳುವಂತೆ ಅವರ ಕಿವಿಯನ್ನು ತೆರೆದು ಅಧರ್ಮವನ್ನು ಬಿಟ್ಟು ಬಿಡಬೇಕೆಂದು ಅವರಿಗೆ ಆಜ್ಞಾಪಿಸುವನು. ಅವರು ಅದನ್ನು ಕೇಳಿ ಆತನನ್ನು ಸೇವಿಸಿದರೆ ತಮ್ಮ ದಿನಗಳನ್ನು ಸುಖದಲ್ಲಿಯೂ ವರುಷಗಳನ್ನು ಸಂತೋಷದಲ್ಲಿಯೂ ಕಳೆಯುವರು" (ಯೋಬ. 36:8–11).

ಐಗುಪ್ತದೇಶದ ಶೀಶಕನು ರೆಹಬ್ಬಾಮನು ಇಸ್ರಾಯೇಲರಿಗೂ ವಿರುದ್ಧವಾಗಿ ಬಂದು ಅವರನ್ನು ಸೋಲಿಸಿ ಸೆರೆ ಹಿಡಿದಾಗ ರೆಹಬ್ಬಾಮನೂ ಇಸ್ರಾಯೇಲರು ದೇವರು ನ್ಯಾಯವಂತನೆಂದು ಒಪ್ಪಿ ತಮ್ಮನ್ನು ತಗ್ಗಿಸಿಕೊಂಡರು. ದೇವರು ನ್ಯಾಯವಂತನಾಗಿದ್ದಾನೆ. ಆತನು ಈ ರೀತಿ ಶಿಕ್ಷಿಸುವುದಕ್ಕೆ ನಾವು ಯೋಗ್ಯರು ಎಂದು ಒಪ್ಪಿಕೊಂಡು ಪಶ್ಚಾತ್ತಾಪಪಡುವಂತೆ ದೇವಜನರನ್ನು ಕರ್ತನು ಪುನರ್‌ಸ್ಥಾಪಿಸುವವನಾಗಿರುತ್ತಾನೆ. ಯಾವಾಗ ರೆಹಬ್ಬಾಮ ಹಾಗೂ ಇಸ್ರಾಯೇಲರು ಪಶ್ಚಾತ್ತಾಪಪಟ್ಟರೋ ಆಗ ಪ್ರವಾದಿಯಾದ ಶೇಮಾಯನ ಮೂಲಕ ದೇವರು ಮಾತನಾಡಿ ಅವರನ್ನು ಶೀಶಕನ ಕೈಗಳಿಂದ ಬಿಡುಗಡೆಗೊಳಿಸುವ ವಾಗ್ದಾನ ಮಾಡಿದನೆಂದು ಕಾಣಬಹುದು.

ನಮ್ಮ ಕರ್ತನು ಪ್ರೀತಿಸುವವನು, ಕನಿಕರವುಳ್ಳವನು ಆಗಿದ್ದಾನೆ. "ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ಆತನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ಕೃಪೆಯು ಅಷ್ಟು ಅಪಾರವಾಗಿದೆ" (ಕೀರ್ತ. 103:11).

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ನಿನ್ನ ಕಾರ್ಯಗಳನ್ನೆಲ್ಲಾ ಧ್ಯಾನಿಸುವೆನು; ನಿನ್ನ ಪ್ರವರ್ತನೆಗಳನ್ನು ಸ್ಮರಿಸುವೆನು
(ಕೀರ್ತ. 77:12).

**ವಿಶೇಷ ಸೂಚನೆ**

ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **0091–820 2002781, 0091–9902334941, 0091–9964070654, 0091–820 2559712.**

## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್
## ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ


**0091 820 2002781, 0091 9902334941**




# ನಮ್ಮೊಂದಿಗೆ ಆಚರಿಸಿ



ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ



**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 0091 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

## ಮಕ್ಕಳ ಸ್ವರ

1) ಯಾರು ಊರ್ ದೇಶದಲ್ಲಿ ವಾಸವಾಗಿದ್ದನು ?

2) ಸೂರ್ಯ ಮತ್ತು ಚಂದ್ರಕ್ಕೆ ಆಜ್ಞಾಪಿಸಿದವರು ಯಾರು?

3) ಲೆಬನೋನಿನಲ್ಲಿ ಯಾವ ತರದ ಮರವಿತ್ತು?

4) ಸ್ತೆಫನನು ಹೇಗೆ ಸತ್ತನು?

5) ಯೇಸುಕ್ರಿಸ್ತನನ್ನು ಎಲ್ಲಿ ಬಂಧಿಸಿದರು?

6) ಜೆಬದಾಯನ ಇಬ್ಬರು ಮಕ್ಕಳು ಯಾರು?

7) ದಾವೀದ ಮತ್ತು ಗೊಲ್ಯಾತನ ಬಗ್ಗೆ ಹೇಳುವ ಪುಸ್ತಕ ಯಾವುದು?

8) ಯಾಕೋಬನು ಹಿರಿಯ ಮಗನನ್ನು ಏನೆಂದು ಕರೆಯುತ್ತಿದ್ದನು?

9) ಪೌಲನ ಮಿಷನರಿ ಪ್ರಯಾಣದ ಪುಸ್ತಕ ಯಾವುದು?

10) ಸೆರೆಮನೆಯ ಅಧಿಕಾರಿ ಎಲ್ಲಿ ತನ್ನ ನಂಬಿಕೆಯನ್ನು ಕಂಡು ಕೊಂಡನು?

### ಅಕ್ಟೋಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು

1) ಸೌಲ, ದಾವೀದ, ಸೊಲೊಮೋನ
2) ನೋಹ
3) ನಜರೇತ್
4) ಬಾರ್ತಿಮಾಯ
5) ಫಿಲಿಪ್ಪಿಯ
6) ಏಳು ವರ್ಷ
7) ಏಸಾವ
8) ಕಾಗೆ ಮತ್ತು ಪಾರಿವಾಳ
9) ನಾಮಾನ
10) ಸದೋಮಗೋಮರ್.

## ಬೇಕಾಗಿದ್ದಾರೆ

- ಸ್ಟಾಫ್ ನರ್ಸ್ (ಜಿಎನ್‌ಎಮ್ ನರ್ಸ್ ಮತ್ತು ಬಿಎಸ್‌ಸಿ ನರ್ಸ್)
- ಎಮ್‌ಎಸ್‌ಡಬ್ಲ್ಯು (ಸೈಕಾಲಾಜಿಸ್ಟ್)
- ಎಮ್.ಬಿ.ಬಿ.ಎಸ್ ವೈದರು
- ಮನೋರೋಗ ತಜ್ಞವೈದ್ಯರು (ಸೈಕಿಯಾಟ್ರಿಸ್ಟ್)
- ಕ್ಲೀನರ್ ಮತ್ತು ವಾರ್ಡ್ ಬಾಯ್
- ಲ್ಯಾಬ್ ಟೆಕ್ನಿಷಿಯನ್ ವಿಶ್ವಾಸದಮನೆಯ ಆಸ್ಪತ್ರೆಗೆ ತ್ವರೆಯಾಗಿ ಬೇಕಾಗಿದ್ದಾರೆ.

**ಉಚಿತ ವಸತಿ ಸೌರ್ಕಯ ಮತ್ತು ಉತ್ತಮ ವೇತನವನ್ನು (ಸಂಬಳ)ವನ್ನು ಕೊಡಲಾಗುವುದು.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ;

**0091–9902334941, 0091–820 2002781.**

ಅವರು ಯೆಹೋವನ ಪೂಜ್ಯವಾದ ಮಹಾನಾಮವನ್ನು ಕೊಂಡಾಡಲಿ;
ಆತನು ಪರಿಶುದ್ಧನು (ಕೀರ್ತ. 99:3).